PCR 2/2025

ಪ್ರಾಸಾ-01/ ಚಾಸಾ-01

# ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,ಧಾರವಾಡ

**P.C.No.**02/2025

ಪ್ರಾಸಾ–01
ಚಾಸಾ–01

| | | |
|---|---|---|
| ಸಾಕ್ಷಿದಾರರಹೆಸರು | – | ನೀಲಿಮಾ ಅಶೋಕ ಕೊಟ್ಟಣ |
| ತಂದೆಯಹೆಸರು | – | ಅಶೋಕ ಕೊಟ್ಟಣ |
| ವಯಸ್ಸು | – | 41 ವರ್ಷ |
| ಉದ್ಯೋಗ | – | ಸಹಾಯಕ ಔಷಧ ನಿಯಂತ್ರಕರು–2, ಧಾರವಾಡವೃತ್ತ,ಹುಬ್ಬಳ್ಳಿ |
| ವಾಸಸ್ಥಳ | – | ಹುಬ್ಬಳ್ಳಿ |

ಸತ್ಯಪ್ರತಿಜ್ಞೆಮೇರೆಗೆ ದಿನಾಂಕ: 18/02/2026

**Enquiry U/sec** 202 **Cr.PC as per Judgment of Hon'ble High Court in W.P No.**103486/2022 **dtd**: 7–6–2024.

1) ದಿನಾಂಕ: 12/09/2024 ರಿಂದ ನಾನು ಧಾರವಾಡ ವೃತ್ತ, ಹುಬ್ಬಳ್ಳಿಯಲ್ಲಿ ಸಹಾಯಕ ಔಷಧ ನಿಯಂತ್ರಕರು–2 ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಸರ್ಕಾರದ ಅಧಿಸೂಚನೆ ಆದೇಶ ಸಂಖ್ಯೆ: ಆಕುಕ 20 ಐಎಂಎಂ 2010, ದಿನಾಂಕ:20/04/2010 ಹಾಗೂ ಕಚೇರಿ ಆಧೇಶ ಸಂಖ್ಯೆ: ಔನಿಇ/223/ಸಿಬ್ಬಂದಿ/ 2011–12, ದಿನಾಂಕ:16/07/2011 ಮತ್ತು ಕರ್ನಾಟಕ ರಾಜ್ಯ ಪತ್ರ ದಿನಾಂಕ:20/10/2011 ರನ್ವಯ ನಾನು ಸೆಕ್ಷನ್21 ರ ಅಡಿಯಲ್ಲಿ ಔಷದ ಪರಿವೀಕ್ಷಕರಾಗಿ ನೇಮಕಗೊಂಡಿರುತ್ತೇನೆ. ಸಾಕ್ಷಿ ಗುರುತಿಸಿದ ದಿಃ20–4–2010 ರ ಆದೇಶದ ದೃಢೀಕೃತ ನಕಲು ನಿಶಾನೆ ಪಿ–1 ಎಂದು, ದಿಃ 16–7–2011ರ ಆದೇಶದ ದೃಢೀಕೃತ ನಕಲು ನಿಶಾನೆ ಪಿ–2 ಎಂದು, ದಿಃ ದಿಃ20–10–2011 ರ ಗೆಜೆಟ್ ನೊಟಿಫಿಕೇಶನ ದೃಡೀಕೃತ ನಕಲನ್ನು ನಿಶಾನೆ ಪಿ–3 ಎಂದು ಗುರುತಿಸಲಾಗಿದೆ.

2) ಸರ್ಕಾರದ ಅಧಿಸೂಚನೆ (3) ಆದೇಶ ಸಂಖ್ಯೆ: ಆಕುಕ 113 ಐಎಂಎಂ 2024, ದಿನಾಂಕ:27/08/2024 ಮತ್ತು ತಿದ್ದುಪಡಿ (3) ದಿನಾಂಕ: 04/09/2024 ಹಾಗೂ ಕಚೇರಿ ಆಧೇಶ

PCR 2/2025

ಪ್ರಾಸಾ-01/ ಚಾಸಾ-01

ಸಂಖ್ಯೆ: ಔನಿಇ/124(2)/ಸಿಬ್ಬಂದಿ/2024-25 ದಿನಾಂಕ: 05/09/2024 ರನ್ವಯ ನಾನು ಸಹಾಯಕ ಔಷಧ ನಿಯಂತ್ರಕರು-2, ಧಾರವಾಡ ವೃತ್ತ, ಹುಬ್ಬಳ್ಳಿಗೆ ವರ್ಗಾವಣೆಗೊಂಡಿರುತ್ತೇನೆ. ಸಾಕ್ಷಿ ಗುರುತಿಸಿದ ದಿಃ27-8-2024 ರ ಅಧಿಸೂಚನೆ ದೃಢೀಕೃತ ನಕಲು ನಿಶಾನೆ ಪಿ-4 ಎಂದು , ದಿಃ 4-9-2024 ರ ತಿದ್ದುಪಡಿ ಆದೇಶದ ದೃಢೀಕೃತ ನಕಲು ನಿಶಾನೆ ಪಿ-5 ಎಂದು, ದಿಃ 5-9-2024 ರ ಆದೇಶದ ದೃಡೀಕೃತ ನಕಲನ್ನು ನಿಶಾನೆ ಪಿ-6 ಎಂದು ಗುರುತಿಸಲಾಗಿದೆ.

3) ಚಾಸಾ-2 ಶ್ರೀ ದಯಾನಂದ ಕಾಡದೇವರ ಆಗಿನ ಡ್ರಗ್ಸ್ ಇನ್ಸಪೆಕ್ಟರ-3, ಧಾರವಾಡ ವೃತ್ತ, ಹುಬ್ಬಳ್ಳಿ ರವರು ಕರ್ನಾಟಕ ರಾಜ್ಯ ಪತ್ರ ದಿನಾಂಕ 25/12/2014 ಹಾಗೂ ಕಚೇರಿ ಆದೇಶ ಸಂಖ್ಯೆ: ಔನಿಇ/97/ಸಿಬ್ಬಂದಿ/2014-15 ದಿನಾಂಕ 06/12/2014 ರನ್ವಯ ಸೆಕ್ಷನ್ 21 ರ ಅಡಿಯಲ್ಲಿ ಔಷಧ ಪರಿವೀಕ್ಷಕರಾಗಿ ನೇಮಕಗೊಂಡಿರುತ್ತಾರೆ. ಸಾಕ್ಷಿ ಗುರುತಿಸಿದ ದಿಃ 25-12-2014 ರ ಕರ್ನಾಟಕ ರಾಜ್ಯ ಪತ್ರದ ದೃಢೀಕೃತ ನಕಲು ನಿಶಾನೆ ಪಿ-7 ಎಂದು, ದಿಃ 6-12-2014 ರ ಅಧಿಕೃತ ಜ್ಞಾಪನಾ ಪತ್ರದ ದೃಢೀಕೃತ ನಕಲನ್ನು ನಿಪಿ-8 ಎಂದು ಕ್ರಮವಾಗಿ ಗುರುತಿಸಲಾಗಿದೆ.

4) ಚಾಸಾ-2 ರವರು ಸರ್ಕಾರದ ಅಧಿಸೂಚನೆ ಆದೇಶ ಸಂಖ್ಯೆ: ಆಕುಕ 159 ಐಎಂಎಂ 2020, ದಿನಾಂಕ: 07/10/2020 ಹಾಗೂ ಕಚೇರಿ ಆದೇಶ ಸಂಖ್ಯೆ: ಔನಿಇ/70/ಸಿಬ್ಬಂದಿ/2020-21 ದಿನಾಂಕ 09/10/2020 ರನ್ವಯ ಔಷಧ ಪರವೀಕ್ಷಕರು-3, ಧಾರವಾಡ ವೃತ್ತ, ಹುಬ್ಬಳ್ಳಿಗೆ ವರ್ಗಾವಣೆಗೊಂಡಿರುತ್ತಾರೆ. ದಿಃ 7-10-2020 ರ ಅಧಿಸೂಚನೆಯ ದೃಢೀಕೃತ ನಕಲು ನಿಶಾನೆ ಪಿ- 9 ಎಂದು ಅದೇರೀತಿ ದಿಃ 9-10-2020 ರ ಅಧಿಸೂಚನೆಯ ದೃಢೀಕೃತ ನಕಲು ನಿಶಾನೆ ಪಿ-10 ಎಂದು ಕ್ರಮವಾಗಿ ಗುರುತಿಸಲಾಗಿದೆ.

5) ಕರ್ನಾಟಕ ರಾಜ್ಯ ಪತ್ರ ಅಧಿಸೂಚನೆ ಆದೇಶ ಸಂಖ್ಯೆ: ಆಕುಕ 83 ಐಎಂಎಂ 2014, ದಿನಾಂಕ: 24/03/2014 ರನ್ವಯ ನನಗೆ ಹಾಗೂ ಚಾಸಾ-2 ರವರಿಗೆ ಧಾರವಾಡ ಜಿಲ್ಲೆಯ ಸಂಪೂರ್ಣ ಕಾರ್ಯವ್ಯಾಪ್ತಿಇರುತ್ತದೆ. ಸಾಕ್ಷಿ ಗುರುತಿಸಿದ ಅದರ ದೃಢಿಕೃತ ನಕಲನ್ನು ನಿಪಿ-11 ಎಂದು ಗುರುತಿಸಿದೆ.

6) ಸರ್ಕಾರದ ಅಧಿಸೂಚನೆ ದಿನಾಂಕ:22/03/1957 ರನ್ವಯ ಕರ್ನಾಟಕ ರಾಜ್ಯದಲ್ಲಿ ಔಷಧ ಮತ್ತು ಕಾಂತಿವರ್ಧಕ ಅಧಿನಿಯಮದಡಿಯಲ್ಲಿ ಚಾಪ್ಟರ್-4 ಜಾರಿಗೆ ಬಂದಿರುತ್ತದೆ. ಸಾಕ್ಷಿ ಅದರ ದೃಡೀಕೃತ ನಕಲನ್ನು ಗುರುತಿಸಿದ್ದು ಅದನ್ನು ನಿಪಿ- 12 ಎಂದು ಗುರುತಿಸಿದೆ.

7) ಸರ್ಕಾರದ ಅಧಿಸೂಚನೆ ದಿನಾಂಕ: 19/12/1958 ರನ್ವಯ ಕರ್ನಾಟಕ ರಾಜ್ಯದಲ್ಲಿ ಔಷಧ ಮತ್ತು ಕಾಂತಿವರ್ಧಕ ಅಧಿನಿಯಮದಡಿಯಲ್ಲಿ ಸೆಕ್ಷನ್ 18 ದಿನಾಂಕ: 01/03/1959 ರಿಂದ ಅನ್ವಯವಾಗುವಂತೆ ಜಾರಿಗೆ ಬಂದಿರುತ್ತದೆ. ಸಾಕ್ಷಿ ಅದರ ದೃಡೀಕೃತ ನಕಲನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-13 ಎಂದು ಗುರುತಿಸಿದೆ.

8) ದಿನಾಂಕ: 24/11/2023 ರಂದು ತನಿಖಾಧಿಕಾರಿಯಾದ ಶ್ರೀ ದಯಾನಂದ ಕಾಡದೇವರ (ಚಾಸಾ-2) ರವರು ಶ್ರೀ ನೀಲಕಂಠ ರಾರೋಡ ಸಹಾಯಕ ಔಷಧ ನಿಯಂತ್ರಕರು-2, ಧಾರವಾಡ ವೃತ್ತ, ಹುಬ್ಬಳ್ಳಿ (ಚಾಸಾ-20) ಇವರಿಗೆ ಸಂಬಂಧಿತ ಔಷಧಿಯ ತನಿಖಾ ದಾಖಲೆಗಳನ್ನು ಹಸ್ತಾಂತರಿಸಿದ್ದು, ತದನಂತರ ದಿನಾಂಕ:13/09/2024 ರಂದು ಚಾಸಾ-20 ರವರು ಸದರಿ ತನಿಖಾ ದಾಖಲೆಗಳನ್ನು ನನಗೆ ಹಸ್ತಾಂತರಿಸಿರುತ್ತಾರೆ.

9) ದಿನಾಂಕ:18/12/2021 ರಂದು ಖಚಿತ ಮಾಹಿತಿಯ ಮೇರೆಗೆ, ಡಾ. ಗೋಪಿನಾಥ್ ಆಗಿನ ಡ್ರಗ್ಸ್‌ಇನ್ಸೆಕ್ಟರ್, ಸಿಡಿಎಸ್ಸಿಒ ಸಬ್ಜೋನ್, ಬೆಂಗಳೂರು (ಚಾ.ಸಾ-3) ಮತ್ತು ಶ್ರೀ ಕೋಟೇಶ್ವರರಾವ್, ಡ್ರಗ್‌ಇನ್ಸೆಕ್ಟರ್, ಸಿಡಿಎಸ್ಸಿಒ ಸಬ್ಜೋನ್, ಬೆಂಗಳೂರು (ಚಾ.ಸಾ-4) ಇವರು, ಶ್ರೀ ಮಲ್ಲಿಕಾರ್ಜುನ್ಕೆ.ಎಸ್. ಆಗಿನ ಸಹಾಯಕ ಔಷಧ ನಿಯಂತ್ರಕರು-2,ಧಾರವಾಡ ವೃತ್ತ(ಚಾ.ಸಾ-5) ಮತ್ತು ಶ್ರೀ ದಯಾನಂದ ಕಾಡದೇವರ ಆಗಿನ ಡ್ರಗ್ಸ್ ಇನ್ಸೆಕ್ಟರ್-3, ಧಾರವಾಡ ವೃತ್ತ, ಹುಬ್ಬಳ್ಳಿ (ಚಾ.ಸಾ-2) ಇವರೊಂದಿಗೆ ಸೇರಿ, ಆರೋಪಿ ಎ1 ಸಂಸ್ಥೆ, ಮೆ: ನಂದಿಕಾ ಹೆಲ್ತ್‌ಕೇರ್, ಸಿಟಿಎಸ್ ನಂ. 2877-2920, ಅಂಗಡಿ ನಂ. 1, ಜಿಎಫ್-86 ಮತ್ತು 87, ಸ್ಯಾಟಲೈಟ್‌ಕಾಂಪ್ಲೆಕ್ಸ್, ಕೊಪ್ಪಿಕರ್ ರಸ್ತೆ, ಹುಬ್ಬಳ್ಳಿಗೆ ಭೇಟಿ ನೀಡಿ, ಆರೋಪಿ ಎ2 ಸಂಸ್ಥೆಯಾದ ಮೆ: ಬರ್ಕ್ ಮತ್ತು ಮಾರ್ ಫಾರ್ಮಾಸ್ಯುಟಿಕಲ್ಸ್, ಕೋಯಂಬತ್ತೂರು ಇವರು ಮಾರಾಟ ಮಾಡಿದ KEPSI-50, KEPSI-100 & KEPSIMET ಮಾತ್ರೆಗಳು ಎಂಬ ಶಂಕಿತ ಔಷಧಿಗಳ ಕುರಿತು ತನಿಖೆ ನಡೆಸಿದರು. ಜಂಟಿ ಪರಿವೀಕ್ಷಣಾ ವರದಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಅದನ್ನು ನಿ.ಪಿ.14 ಎಂದು ಗುರುತಿಸಿದೆ.

10) ತನಿಖೆಯ ಸಮಯದಲ್ಲಿ, ಆರೋಪಿ ಎ1 ಸಂಸ್ಥೆಯವರು ಸದರಿ ಔಷಧಿಗಳ ಖರೀದಿ ಮತ್ತು ಮಾರಾಟದ ವಿವರಗಳನ್ನು ಹೇಳಿಕೆಯೊಂದಿಗೆ ಸಲ್ಲಿಸಿದರು. ಸಾಕ್ಷಿಯು ಸದರಿ ಹೇಳಿಕೆ ಮತ್ತು ದಾಖಲೆಗಳನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ಒಟ್ಟಾರೆ ನಿ.ಪಿ.15 ಎಂದು ಗುರುತಿಸಿದೆ. (ಅದು ಪುಟ 75 ರಿಂದ 80 ರ ವರೆಗೆ ಇದೆ ) ಮಾರಾಟದ ವಿವರಗಳನ್ನು ಚಾ.ಸಾ.-2 ರವರು ಪರಿಶೀಲಿಸಿದಾಗ, ಆರೋಪಿ ಎ1 ಸಂಸ್ಥೆಯವರು ರಾಜ್ಯದೊಳಗಿನ ವಿವಿಧ ಸಂಸ್ಥೆಗಳಿಗೆ ಶಂಕಿತ ಔಷಧಿಗಳನ್ನು ಸರಬರಾಜು ಮಾಡಿರುವುದು ಕಂಡು ಬಂತು.

11) ದಿನಾಂಕ 20/12/2021 ರಂದು ಚಾ.ಸಾ–2 ರವರು, ಸದರಿ ಶಂಕಿತ ಔಷಧಿಗಳು ಸರಬರಾಜಾದ ಕುರಿತು ಸಹಾಯಕ ಔಷಧ ನಿಯಂತ್ರಕರ ಆಯಾ ವೃತ್ತ ಕಚೇರಿಗಳಿಗೆ ಪತ್ರ ಕಳುಹಿಸಿ, ಸೂಕ್ತ ಕ್ರಮಕೈಗೊಂಡು ವರದಿಯನ್ನು ಸಲ್ಲಿಸಲು ಕೋರಿರುತ್ತಾರೆ. ಪತ್ರವನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಅದನ್ನು ನಿ.ಪಿ.16 ಎಂದು ಗುರುತಿಸಿದೆ.

12) ದಿನಾಂಕ 29/12/2021 ರಂದು, ಆರೋಪಿ (ಎ 1) ಶ್ರೀ ಮಹೇಶ್‌ಕುಮಾರ್ ಜಿ. ಎಸ್., ಮೆ: ಪ್ರೂಪರೈಟರ್ ನಂದಿಕಾ ಹೆಲ್ತ್‌ಕೇರ್, ಹುಬ್ಬಳ್ಳಿ, ರವರು ಚಾ.ಸಾ.4 ರವರು ನೀಡಿದ ದಿನಾಂಕ 18/12/2021 ರ ನೋಟಿಸಿಗೆ ಉತ್ತರವನ್ನು ಸಲ್ಲಿಸಿದ್ದು, ಸದರಿ ಔಷಧಿಗಳ ಖರೀದಿ ರಶೀದಿಗಳು, ಮಾರಾಟದ ವಿವರಗಳು, ಪಾವತಿ ವಿಧಾನದ ವಿವರಗಳು ಮತ್ತು ಕೊರಿಯರ್ ರಸೀದಿಗಳ ಪ್ರತಿಗಳನ್ನು ಸಲ್ಲಿಸಿದ್ದು, ಅದನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಒಟ್ಟಾರೆ ಅವುಗಳನ್ನು ನಿ.ಪಿ.17 ಎಂದು ಗುರುತಿಸಿದೆ.( ಅದು ಪುಟ 83 ರಿಂದ 113 ರ ವರೆಗೆ ಇದೆ ).

13) ದಿನಾಂಕ 10/01/2022 ರಂದು, ಚಾ.ಸಾ.–6 ರಾದ ಶ್ರೀ ಶಂಕರ್ ನಾಯಕ್, ಆಗಿನ ಸಹಾಯಕ ಔಷಧ ನಿಯಂತ್ರಕರು, ಮಂಗಳೂರು ವೃತ್ತ, ಮಂಗಳೂರು ಇವರು ದೂರವಾಣಿ ಮುಖಾಂತರ ಸದರಿ ಶಂಕಿತ ಔಷದಗಳು ಆರೋಪಿ–1 ಸಂಸ್ಥೆಗೆ ವಾಪಸು ಕಳುಹಿಸಿರುವ ಬಗ್ಗೆ ನೀಡಿದ ಮಾಹಿತಿಯ ಆಧಾರದ ಮೇಲೆ ಚಾ.ಸಾ–2 ರವರು ಚಾ.ಸಾ.–4 ಮತ್ತು ಪಂಚ ಸಾಕ್ಷಿಗಳಾದ ಶ್ರೀ ಶಿವಾನಂದ ಎಂ. ಮೊರಬದ, 24 ವರ್ಷ, S/o. ಮಲ್ಲಪ್ಪ ಮೊರಬದ, ಬಸ್ತಿ ರಸ್ತೆ, ಅಂಚೆ ಚಬ್ಬಿತಾಲ್ಲೂಕು ಹುಬ್ಬಳ್ಳಿ–581207 (ಚಾ.ಸಾ.–7) ಮತ್ತು ಶ್ರೀ ರಜತ್‌ಆರ್. ಪರದೇಶಿ, 21 ವರ್ಷ, S/o.ರವೀಂದ್ರ, ಬೊಮ್ಮಾಪುರಓಣಿ, ನ್ಯೂ ಇಂಗ್ಲೀಷ ಮೀಡಿಯಂ ಸ್ಕೂಲ್ ಹತ್ತಿರ, ಹುಬ್ಬಳ್ಳಿ–580028 (ಚಾ.ಸಾ.–8) ಇವರೊಂದಿಗೆ ಆರೋಪಿ ಎ 1 ಸಂಸ್ಥೆಗೆ ಭೇಟಿ ನೀಡಿರುತ್ತಾರೆ. ಆ ಸಮಯದಲ್ಲಿ, ಎ 1 ಸಂಸ್ಥೆಯ ದಕ್ಷ ವ್ಯಕ್ತಿಯಾದ ಶ್ರೀ ಪ್ರಶಾಂತ್ ನೀಲಕಂಠನವರ್ (ಚಾ.ಸಾ.–9) ಹಾಜರಿದ್ದರು. ಚಾ.ಸಾ.–9 ರವರು ಶಂಕಿತ ಔಷಧಗಳಾದ 69x10 Tablets of KEPSIMET (Sitagliptin & Metfromin Hydrochloride Tablets), B.No.KTSM2002, D/M:07/2020, DE: 06/2022 & 30x10 Tablets of KEPSI–50 (Sitagliptin Phosphate Tablets IP), B.No. KT50–2001,D/M: 07/2020, D/E: 06/2022, both Mfg by : M/s. Kepnic Pharmaceuticals, Brahman Beli Road, Vill.Belidyod, P.O: Khera, Nalagarh, Dist: Solan (H.P)174101 ದಾಸ್ತಾನನ್ನು ಪ್ರಧಾನ ಮಂತ್ರಿ ಭಾರತೀಯ ಜನೌಷಧಿ ಕೇಂದ್ರ, ನಂ. 4/76/25, ಲೋವರ್ ಗ್ರೌಂಡ್, ಅಧಿಕಾರ ಕಾಂಪ್ಲೆಕ್ಸ್, ಎನ್‌ಎಚ್–68 ಮುಖ್ಯರಸ್ತೆ, ಸುರತ್ಕಲ್–575014

(ಚಾ.ಸಾ.–10) ಸಂಸ್ಥೆಯಿಂದ ವಾಪಸ್ಸು ಬಂದಿರುವುದಾಗಿ ತಿಳಿಸಿರುತ್ತಾರೆ. ನಂತರ ಚಾ.ಸಾ.–2 ರವರು ಫಾರ್ಮ್–17 ಮತ್ತು ಫಾರ್ಮ್–17 ಎ ನಲ್ಲಿ KEPSI–50 Tablets, Batch No. KT50–2001 AND KEPSIMET Tablets Batch No.KTSM–2022 ಮಾದರಿಗಳನ್ನು ವಿಶ್ಲೇಷಣೆಗಾಗಿ ತೆಗೆದುಕೊಂಡಿರುತ್ತಾರೆ. ಸದರಿ ಔಷಧಿಗಳ ಉಳಿದ ದಾಸ್ತಾನನ್ನು ಫಾರ್ಮ್–16 ಮತ್ತು ಪಂಚನಾಮೆ ಅಡಿಯಲ್ಲಿ ವಶಪಡಿಸಿಕೊಂಡಿರುತ್ತಾರೆ. ಅವುಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಗುರುತಿಸಿದ ಚಾ.ಸಾ.–6 ರವರ ದಿನಾಂಕ: 29/01/2022 ವರದಿಯನ್ನು ನಿ.ಪಿ.18 ಎಂದು, ಫಾರ್ಮ್–17 ವನ್ನು ನಿ.ಪಿ. 19 ಎಂದು, ಮತ್ತು ಫಾರ್ಮ–17 ಎ ವನ್ನು ನಿ.ಪಿ. 20 ಎಂದು, ಹಾಗೂ ಫಾರ್ಮ್–16 ವನ್ನು ನಿ.ಪಿ. 21 ಎಂದು ಗುರುತಿಸಲಾಗಿದೆ. ಸಾಕ್ಷಿ ಗುರುತಿಸಿದ ಪಂಚನಾಮೆಯನ್ನು ನಿ.ಪಿ.22 ಎಂದು ಗುರುತಿಸಲಾಗಿದೆ. ದಿಃ 20–12–2021 ರ ನಮ್ಮ ಪತ್ರದ ಆಧಾರದ ಮೇಲೆ ಚಾಸಾ–6 ರವರು ದಿಃ29–1–2022 ರಲ್ಲಿ ಸದರಿ ಶಂಕಿತ ಔಷದಗಳನ್ನು ಆರೋಪಿ–1 ಸಂಸ್ಥೆಗೆ ಚಾಸಾ–10 ರವರು ವಾಪಸು ಕಳುಹಿಸಿದ ಕುರಿತು ವರದಿಯನ್ನು ನಿಶಾನೆ ಪಿ–18 ರಂತೆ ನೀಡಿರುತ್ತಾರೆ. ಆದರೆ ಈ ರೀತಿ ವಾಪಸು ಬಂದ ಕಳುಹಿಸಿದ ವಿಚಾರವನ್ನು ಮೌಖಿಕವಾಗಿ 10–1–2022 ಕ್ಕೂ ಮುಂಚೆ ಚಾಸಾ–6 ರವರು ಚಾಸಾ–2 ರವರಿಗೆ ತಿಳಿಸಿದ್ದರಿಂದ ಚಾಸಾ–2 ರವರು ತನಿಖೆ ಮಾಡಿ ಪಂಚನಾಮೆ ಮಾಡಿ ವಶಪಡಿಸಿಕೊಂಡಿರುತ್ತಾರೆ. ಆನಂತರ ಚಾಸಾ–6 ರವರು ನಿಶಾನೆ ಪಿ–18 ರಂತೆ ವರದಿ ನೀಡಿರುತ್ತಾರೆ.

14) ದಿನಾಂಕ 10/01/2022 ರಂದು ಚಾ.ಸಾ.–2 ಇವರು ವಶಪಡಿಸಿಕೊಂಡ ಔಷಧಿಗಳನ್ನು ಅಂತಿಮ ವರದಿಯನ್ನು ಸಲ್ಲಿಸುವವರೆಗೆ ಅವರ ಸುಪರ್ದಿಯಲ್ಲಿ ಇಟ್ಟುಕೊಳ್ಳಲು ಮಾನ್ಯ ಜೆಎಂಎಫ್ಸಿ–1 ನ್ಯಾಯಾಲಯ, ಹುಬ್ಬಳ್ಳಿ, ಇವರಿಂದ ಅನುಮತಿ ಪಡೆದಿರುವ ಪತ್ರವನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.ಅದನ್ನು ನಿ.ಪಿ.23 ಎಂದು ಗುರುತಿಸಿದೆ.

15) ದಿನಾಂಕ 10/01/2022 ರಂದು ಚಾ.ಸಾ.–2 ಇವರು ವಶಪಡಿಸಿಕೊಂಡ ಔಷಧಿಗಳ ಕುರಿತು ಚಾ.ಸಾ–4 ಮತ್ತು ಚಾ.ಸಾ–5 ಇವರೊಂದಿಗೆ ಸ್ಪಾಟ್ ವರದಿಯನ್ನು ತಯಾರಿಸಿದ್ದು, ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.ಅದನ್ನು ನಿ.ಪಿ.24 ಎಂದು ಗುರುತಿಸಿದೆ.

**ಮುಂದಿನ ವಿಚಾರಣೆಯನ್ನು ಮುಂದೂಡಲಾಯಿತು.**

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ

**ಸಾಕ್ಷಿಯನ್ನು ದಿಃ 5–3–2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದಿನ ವಿಚಾರಣೆಃ**

16) ದಿನಾಂಕ 12/01/2022 ರಂದು ಚಾ.ಸಾ.–2 ರವರು ದಿಃ 11–01–2022 ರ ಪತ್ರದ ಮೂಲಕ KEPSI–50 Tablets, Batch No. KT50–2001 AND KEPSIMET Tablets Batch No.KTSM–2022 ಮಾದರಿ ಔಷಧಿಗಳನ್ನು ಫಾರ್ಮ್–18 ಗಳ ಅಡಿಯಲ್ಲಿ ವಿಶ್ಲೇಷಣೆಗಾಗಿ ಸರ್ಕಾರಿ ವಿಶ್ಲೇಷಕರು, ಪ್ರಾದೇಶಿಕ ಔಷಧ ಪರೀಕ್ಷಾ ಪ್ರಯೋಗಾಲಯ, ಧಾರವಾಡ ಇವರಿಗೆ ಕಳುಹಿಸಿರುತ್ತಾರೆ. ನಾನು ಆ ಕವಚ ಪತ್ರಗಳನ್ನು ಈಗ ನೋಡುತ್ತಿದ್ದೇನೆ ಎಂದು ಹೇಳಿ ಸಾಕ್ಷಿ ಗುರುತಿಸಿದ ಕವಚ ಪತ್ರಗಳನ್ನು ನಿಶಾನೆ ಪಿ–25(ಎ), 25 (ಬಿ) ಎಂದು ಮತ್ತು ಎರಡು ಫಾರ್ಮ್–18 ಗಳನ್ನು ಒಟ್ಟಾರೆ ನಿ.ಪಿ.25(ಸಿ) ಮತ್ತು 25(ಡಿ) ಎಂದು ಕ್ರಮವಾಗಿ ಗುರುತಿಸಲಾಗಿದೆ.

17) ದಿನಾಂಕ 12/01/2022 ರಂದು, ಚಾ.ಸಾ.–2 ರವರು ಸೆಕ್ಷನ್ 18 ಎ ಮತ್ತು 18 ಬಿ ಅಡಿಯಲ್ಲಿ ಎ 1 ಸಂಸ್ಥೆಗೆ ನೋಟಿಸ್ ಜಾರಿಗೊಳಿಸಿ, ವಶಪಡಿಸಿಕೊಂಡ ಔಷಧಿಗಳನ್ನು ಕೊಂಡ ಮೂಲವನ್ನು, ಖರೀದಿ ಮತ್ತು ಮಾರಾಟದ ವಿವರಗಳೊಂದಿಗೆ ಒದಗಿಸಲು ಸೂಚಿಸಿರುವ ಪತ್ರವನ್ನು ಈಗ ನಾನು ನೋಡುತ್ತಿದ್ದೇನೆ ಎಂದು ಹೇಳಿ ಸಾಕ್ಷಿ ಗುರುತಿಸಿದ ಆ ಪತ್ರವನ್ನು ನಿ.ಪಿ. 26 ಎಂದು ಗುರುತಿಸಿದೆ.

18) ದಿನಾಂಕ 13/01/2022 ರಂದು ಎ 1 ಸಂಸ್ಥೆಯ ಚಾ.ಸಾ.–9 ರವರು ನೋಟಿಸಿಗೆ ಪ್ರತಿಕ್ರಿಯೆಯಾಗಿ ಉತ್ತರವನ್ನು ಸಲ್ಲಿಸಿದ್ದು, ಸದರಿ ಔಷಧಗಳನ್ನು ಎ 2 ಸಂಸ್ಥೆ, ಮೆ|| ಬರ್ಕ್ ಮತ್ತು ಮಾರ್ ಫಾರ್ಮಾಸ್ಯುಟಿಕಲ್ಸ್, ಕೋಯಂಬತ್ತೂರು ಇವರಿಂದ ಖರೀದಿಸಿರುವುದಾಗಿ ತಿಳಿಸಿ, ಕ್ರೆಡಿಟ್ ನೋಟ್ ದಿನಾಂಕ 03/01/2022 ಮತ್ತು ಖರೀದಿ ರಶೀದಿಗಳ ದೃಢೀಕೃತ ಪ್ರತಿಗಳನ್ನು ಸಲ್ಲಿಸಿರುವುದಾಗಿ ಹೇಳಿ ಸಾಕ್ಷಿ ಆ ದಾಖಲೆ ನೋಡಿ ಗುರುತಿಸಿರುತ್ತಾರೆ. ಆ ಉತ್ತರ ಪತ್ರ ನಿಶಾನೆ ಪಿ–27 ಎಂದು ರಸೀದಿಗಳ ದೃಢೀಕೃತ ನಕಲುಗಳನ್ನು ನಿಶಾನೆ ಪಿ–27 (ಎ) ದಿಂದ 27 (ಎಫ್) ಎಂದು ಗುರುತಿಸಲಾಗಿದೆ.

19) ದಿನಾಂಕ 31/01/2022 ರಂದು, ಚಾ.ಸಾ–2 ರವರು ಮಾನ್ಯ ಔಷಧ ನಿಯಂತ್ರಕರು, ಬೆಂಗಳೂರು, ರವರಿಗೆ ಸದರಿ ಔಷಧಗಳ ತನಿಖೆ ಕುರಿತು ಪ್ರಥಮ ವರದಿಯನ್ನು ಸಲ್ಲಿಸಿರುವುದಾಗಿ ಹೇಳಿ ಸಾಕ್ಷಿ ಅದನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ನಿ.ಪಿ. 28 ಎಂದು ಗುರುತಿಸಲಾಗಿದೆ.

20) ದಿನಾಂಕ 03/03/2022 ರಂದು, ಚಾ.ಸಾ.–2 ರವರು ದಿನಾಂಕ: 28/02/2022 ರ Kepsi–50 Tablets B.No. KT50–2001 ಔಷಧಿಯ ವಿಶ್ಲೇಷಣಾ ವರದಿ ನಮೂನೆ–13 MR NO.1048–

HUB–21–22/I–2/2647 ರಲ್ಲಿ ಬಂದಿದ್ದನ್ನು ಸ್ವೀಕರಿಸಿದ್ದು, ಶ್ರೀ ತುಕಾರಾಮ್ ಬಿ, ಸರ್ಕಾರಿ ವಿಶ್ಲೇಷಕರು(ಪ್ರಭಾರ), ಪ್ರಾದೇಶಿಕ ಔಷಧ ಪರೀಕ್ಷಾ ಪ್ರಯೋಗಾಲಯ, ಹುಬ್ಬಳಿ ಧಾರವಾಡ ರವರು (ಚಾಸಾ–11) ಸದರಿ ಔಷಧವು "Identification test for sitagliptin Phosphate & Assay for Sitagliptin Phosphate'' ರಲ್ಲಿ ಅನುತ್ತಮ ಗುಣಮಟ್ಟದೆಂದು ಘೋಷಿಸಿರುತ್ತಾರೆ ಎಂದು ವರದಿ ನೀಡಿರುತ್ತಾರೆ ಎಂದು ಹೇಳಿ ಸಾಕ್ಷಿಯು ಆವುಗಳನ್ನು ನೋಡಿ ಗುರುತಿಸಿದ್ದು ಆ ರೀತಿ ಗುರುತಿಸಿದ ಕವಚ ಪತ್ರವನ್ನು ನಿಪಿ–29 ಎಂದು ಹಾಗೂ ನಮೂನೆ–13 ಅನ್ನು ನಿ.ಪಿ.30 ಎಂದು ಗುರುತಿಸಲಾಗಿದೆ.

21) ದಿನಾಂಕ: 04/03/2022 ರಂದು, ಚಾಸಾ–2 ರವರು ಸೆಕ್ಷನ್ 18 ಎ ಮತ್ತು 18 ಬಿ ಅಡಿಯಲ್ಲಿ ನೋಟಿಸ್ ಮತ್ತು ದಿನಾಂಕ: 28/02/2022 ರ ವರದಿಯನ್ನು ಆರೋಪಿ ಎ 1 ಸಂಸ್ಥೆಗೆ ಜಾರಿಗೊಳಿಸಿ ಅವರ ಸ್ವೀಕೃತಿ ಪಡೆದಿರುತ್ತಾರೆ. ಕೆಪ್ಸಿ ಮಾತ್ರೆ ಖರೀದಿ ಮತ್ತು ಮಾರಾಟದ ವಿವರಗಳನ್ನು ಒದಗಿಸಲು ಸೂಚಿಸಿ, ಸದರಿ ನೋಟಿಸ ಪ್ರತಿಯನ್ನು ಮಾಹಿತಿಗಾಗಿ ಮೆ|| ಕೆಪ್ಲಿಕ್ ಫಾರ್ಮಾಸ್ಯುಟಿಕಲ್ಸ್, ಬ್ರಹ್ಮಣ್ ಬೇಲಿ ರಸ್ತೆ, ವಿಲೇಜ್. ಬೆಳಿದ್ವೋದ್, ಪಿ.ಓ: ಖೇರಾ, ನಾಲಾಗಢ, ಜಿಲ್ಲೆ: ಸೋಲನ್, ರಾಜ್ಯ: ಹಿಮಾಚಲಪ್ರದೇಶ 174101 (ಚಾ.ಸಾ.–12) ಇವರಿಗೆ ಕಳುಹಿಸಿರುತ್ತಾರೆ ಎಂದು ಆ ನೊಟೀಸು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಸಾಕ್ಷಿಯು ನೋಡಿ ಗುರುತಿಸಿದ ನೋಟಿಸನ್ನು ನಿ.ಪಿ.31 ಎಂದು ಗುರುತಿಸಿದೆ.

22) ದಿನಾಂಕ: 07/03/2022 ರಂದು, ಚಾ.ಸಾ.–2 ರವರು ದಿನಾಂಕ: 03/03/2022 ರ Kepsimet Tablets, B.No.KTSM2002 ಔಷಧಿಯ ವಿಶ್ಲೇಷಣಾ ವರದಿ ನಮೂನೆ–13 MR NO.1049–HUB–21–22/I–1–2753 ಸ್ವೀಕರಿಸಿದ್ದು, ಶ್ರೀ ತುಕಾರಾಮ್ ಬಿ,ಸರ್ಕಾರಿ ವಿಶ್ಲೇಷಕರು(ಪ್ರ), ಪ್ರಾದೇಶಿಕ ಔಷಧ ಪರೀಕ್ಷಾ ಪ್ರಯೋಗಾಲಯ, ಹುಬ್ಬಳಿ ರವರು (ಚಾಸಾ–11) ಸದರಿ ಔಷಧವು "Identification test for Sitaglptin Phsophate & Assay for Sitaglptin Phosphate & Test for Disintegraton'' ರಲ್ಲಿ ಅನುತ್ತಮ ಗುಣಮಟ್ಟದೆಂದು ಘೋಷಿಸಿರುತ್ತಾರೆ ಎಂದು ವರದಿ ನೀಡಿರುತ್ತಾರೆ ಎಂದು ಸಾಕ್ಷಿ ಅದನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನೋಡಿ ಗುರುತಿಸಿದ ಕವಚ ಪತ್ರವನ್ನು ನಿಪಿ–32 ಎಂದು ಹಾಗೂ ನಮೂನೆ–13 ಅನ್ನು ನಿಪಿ–33 ಎಂದು ಗುರುತಿಸಲಾಗಿದೆ.

23) ದಿನಾಂಕ: 07/03/2022 ರಂದು ಚಾಸಾ–2 ರವರು ಸೆಕ್ಷನ್ 18 ಎ ಮತ್ತು 18 ಬಿ ಅಡಿಯಲ್ಲಿ ನೋಟಿಸ್ ನೀಡಿ ಅದರ ಜೊತೆಗೆ ದಿನಾಂಕ: 28/02/2022 ರ ವರದಿಯನ್ನು ಆರೋಪಿ ಎ 1 ಸಂಸ್ಥೆಗೆ ಜಾರಿಗೊಳಿಸಿ ಅವರ ಸ್ವೀಕೃತಿ ಅದರ ಮೇಲೆ ಪಡೆದಿರುತ್ತಾರೆ. ಕೆಪ್ಸಿಮೆಟ್ ಮಾತ್ರೆ ಖರೀದಿ ಮತ್ತು ಮಾರಾಟದ ವಿವರಗಳನ್ನು ಒದಗಿಸಲು ಸೂಚಿಸಿ, ಸದರಿ ನೋಟಿಸ ಪ್ರತಿಯನ್ನು ಮಾಹಿತಿಗಾಗಿ ಚಾ.ಸಾ.–12 ಮೆ|| ಕೆಪ್ಲಿಕ್

ಫಾರ್ಮಾಸ್ಯುಟಿಕಲ್ಸ್ ಇವರಿಗೆ ಅಂಚೆ ಮೂಲಕ ಕಳುಹಿಸಿರುತ್ತಾರೆ ಎಂದು ಹೇಳಿ ಅದು ಚಾಸಾ–12 ರವರಿಗೆ ಸ್ವೀಕೃತಿಯಾದ ಬಗ್ಗೆ ಹಾಗೂ ಅಂಚೆ ಸ್ವೀಕೃತಿಯನ್ನು ಹಾಜರುಪಡಿಸಿರುತ್ತಾರೆ ಎಂದು ಸಾಕ್ಷಿ ಆ ನೋಟೀಸು ಮತ್ತು ಅಂಚೆ ಸ್ವೀಕೃತಿ ಪತ್ರ ನೋಡಿ ಸಾಕ್ಷಿ ಗುರುತಿಸಿರುತ್ತಾರೆ . ಸಾಕ್ಷಿ ಗುರುತಿಸಿದ ಆ ನೋಟಿಸನ್ನು ನಿ.ಪಿ.34 ಎಂದು ಮತ್ತು ಅಂಚೆ ಸ್ವೀಕೃತಿಯನ್ನು ನಿ.ಪಿ. 35 ಎಂದು ಗುರುತಿಸಿದೆ.

24) ದಿನಾಂಕ: 28/03/2022 ರಂದು ಚಾ.ಸಾ.–2 ಅವರು ಚಾ.ಸಾ.–12 ಇವರಿಂದ ದಿನಾಂಕ 19/03/2022 KEPSI–50 Tablets, B.No. KT50–2001 ರ ತಯಾರಿಕೆಗೆ ಸಂಬಂಧಿಸಿದಂತೆ ಉತ್ತರ ಪತ್ರವನ್ನು ಸ್ವಿಕರಿಸಿದ್ದು, ಅದರ ಜೊತೆ ದೂರು ಪ್ರತಿ, ವಿಶ್ಲೇಷಣಾ ಪ್ರಮಾಣಪತ್ರ ಮತ್ತು ಬ್ಯಾಚ್ ಪ್ರೊಸೆಸಿಂಗ್ ಮತ್ತು ಪ್ಯಾಕಿಂಗ್ ದಾಖಲೆಗಳೊಂದಿಗೆ ಸ್ವೀಕರಿಸಿರುತ್ತಾರೆ. ಚಾಸಾ12 ಇವರು ಉತ್ತರದಲ್ಲಿ, ಅವರು ವಿಶ್ಲೇಷಣಾ ವರದಿಯನ್ನು ಚಾಲೆಂಜ್ ಮಾಡುವುದಾಗಿ ಮತ್ತು ತಮ್ಮ ಹೆಸರಿನಲ್ಲಿ ಸದರಿ ಶಂಕಿತ ಔಷಧಿ ಮಾರಾಟಕ್ಕೆ ಸಂಬಂಧಿಸಿದಂತೆ ಹಿಮಾಚಲ ಪ್ರದೇಶದ ರಾಜ್ಯ ಔಷಧ ನಿಯಂತ್ರಣ ಪ್ರಾಧಿಕಾರಕ್ಕೆ ದೂರು ಸಲ್ಲಿಸಿರುವುದಾಗಿ ತಿಳಿಸಿದ್ದರು. ಸಾಕ್ಷಿಯು ನೋಡಿ ಗುರುತಿಸಿದ ದಿನಾಂಕ 19/03/2022 ಉತ್ತರ ನಿಶಾನೆ ಪಿ–36 ಎಂದು ಚಾಸಾ–12 ರವರು ಕಳುಹಿಸಿದ್ದ ಈ ಮೇಲ್ ನಿಶಾನೆ ಪಿ–36 (ಎ) ಎಂದು ಅದೇರೀತಿ ಅದಕ್ಕೆ ಸಂಬಂಧಿಸಿದ ಹಾಗೆ ಸರ್ಟಿಪಿಕೇಟ್ ಅನ್ಯಾಲಿಸಿಸ್ ರಿಪೋರ್ಟ ಮತ್ತು ಅವರ ತಯಾರಿಕೆಗೆ ಸಂಬಂಧಪಟ್ಟ ದಾಖಲೆಗಳ ಪ್ರತಿಗಳನ್ನು ಕಳುಹಿಸಿರುತ್ತಾರೆ ಎಂದು ಸಾಕ್ಷಿ ಅದನ್ನು ನೋಡಿ ಗುರುತಿಸಿರುತ್ತಾರೆ ( ಪುಟ–158 ರಿಂದ 198). ಆದರೆ ಅದು ಜರಾಕ್ಸ ಪ್ರತಿಗಳಾಗಿರುವುದರಿಂದ ಅದನ್ನು ಗುರುತು ಮಾಡಿಲ್ಲ. ಸಾಕ್ಷಿ ಗುರುತಿಸಿದ ಚಾಸಾ–12 ರವರು ಕಳುಹಿಸಿದ ಈ ಮೇಲ್ ಜರಾಕ್ಸ ಪ್ರತಿಯಾಗಿರುವುದರಿಂದ ಅದನ್ನು ಗುರುತಿಸಿರುವುದಿಲ್ಲ. ಸಾಕ್ಷಿ ಅಂಚೆ ಕವರ ನೋಡಿ ಗುರುತಿಸಿರುತ್ತಾರೆ ಅದನ್ನು ನಿಶಾನೆ ಪಿ–36 (ಎ) ಎಂದು ಗುರುತಿಸಲಾಗಿದೆ

ಮುಂದಿನ ವಿಚಾರಣೆಯನ್ನು ಮುಂದೂಡಲಾಯಿತು.

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

**(ಬಿ. ಎಸ್. ಭಾರತಿ)**
ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ
ನ್ಯಾಯಾಧೀಶರು, ಧಾರವಾಡ.

**ಸಾಕ್ಷಿಯನ್ನು ದಿಃ 6-4-2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ವಿಚಾರಣೆಃ**

25. ದಿನಾಂಕ: 28/03/2022 ರಂ ದು ಚಾ.ಸಾ.-2 ಅವರು ಚಾ.ಸಾ.-12 ಇವರಿಂದ ದಿನಾಂಕ 23/03/2022 KEPSIMET Tablets, B.No.KTSM2002 ರ ತಯಾರಿಕೆಗೆ ಸಂಬಂಧಿಸಿದಂತೆ ಉತ್ತರ ಪತ್ರವನ್ನು ಸ್ವಿಕರಿಸಿದ್ದು , ಅದರ ಜೊತೆ ದೂರು ಪ್ರತಿ, ವಿಶ್ಲೇಷಣಾ ಪ್ರಮಾಣಪತ್ರ ಮತ್ತು ಬ್ಯಾಚ್ ಪ್ರೊಸೆಸಿಂಗ್ ಮತ್ತು ಪ್ಯಾಕಿಂಗ್ ದಾಖಲೆಗಳೊಂದಿಗೆ ಸ್ವೀಕರಿಸಿರುತ್ತಾರೆ. ಚಾಸಾ12 ಇವರು ಉತ್ತರದಲ್ಲಿ, ಅವರು ವಿಶ್ಲೇಷಣಾ ವರದಿಯನ್ನು ಚಾಲೆಂಜ್ ಮಾಡುವುದಾಗಿ ಮತ್ತು ತಮ್ಮ ಹೆಸರಿನಲ್ಲಿ ಸದರಿ ಶಂಕಿತ ಔಷಧಿ ಮಾರಾಟಕ್ಕೆ ಸಂಬಂಧಿಸಿದಂತೆ ಹಿಮಾಚಲ ಪ್ರದೇಶದ ರಾಜ್ಯ ಔಷಧ ನಿಯಂತ್ರಣ ಪ್ರಾಧಿಕಾರಕ್ಕೆ ದೂರು ಸಲ್ಲಿಸಿರುವುದಾಗಿ ತಿಳಿಸಿದ್ದರು . ಸಾಕ್ಷಿಯು ನೋಡಿ ಗುರುತಿಸಿದ ದಿನಾಂಕ 23/03/2022 ಉತ್ತರ ನಿಶಾನೆ ಪಿ-37 ಎಂದು ಗುರುತಿಸಲಾಗಿದೆ.ಅದೇ ರೀತಿ ಅದಕ್ಕೆ ಸಂಬಂಧಿಸಿದ ಹಾಗೆ ಸರ್ಟಿಪಿಕೇಟ್ ಅನ್ಯಾಲಿಸಿಸ್ ರಿಪೋರ್ಟ ಮತ್ತು ಅವರ ತಯಾರಿಕೆಗೆ ಸಂಬಂಧಪಟ್ಟ ದಾಖಲೆಗಳ ಪ್ರತಿಗಳನ್ನು ಕಳುಹಿಸಿರುತ್ತಾರೆ ಎಂದು ಸಾಕ್ಷಿ ಅದನ್ನು ನೋಡಿ ಗುರುತಿಸಿರುತ್ತಾರೆ. ( ಪುಟ-200 ರಿಂದ 243) ಆದರೆ ಅದು ಜರಾಕ್ಸ ಪ್ರತಿಗಳಾಗಿರು ವುದರಿಂದ ಅದನ್ನು ಗುರುತು ಮಾಡಿಲ್ಲ. ಸಾಕ್ಷಿ ಅಂಚೆ ಕವರ ನೋಡಿ ಗುರುತಿಸಿರುತ್ತಾರೆ. ಅದನ್ನು ನಿಶಾನೆ ಪಿ-37 (ಎ) ಎಂದು ಗುರುತಿಸಲಾಗಿದೆ.

26) ದಿನಾಂಕ:31/03/2022 ರಂದು ಚಾ.ಸಾ.-2 ರವರು ಆರೋಪಿ ಎ1 ರಿಂದ ದಿನಾಂಕ :21/03/2022 ರ ಉತ್ತರ ಸ್ವೀಕರಿಸಿದರು. KEPSI-50 Tablets ಗಳನ್ನು ಎ2 ಸಂಸ್ಥೆ, ಮೆ|| ಬರ್ಕ್ ಮತ್ತು ಮಾರ್ ಫಾರ್ಮಾಸ್ಯುಟಿಕಲ್ಸ್, ಕೋಯಂಬತ್ತೂರು ಇವರಿಂದ Invoice No. GST-058 dated 19/03/2021 & GST-119 dated 04/06/2021 ರಲ್ಲಿ ಖರೀದಿಸಿರುವುದಾಗಿ ತಿಳಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿರುತ್ತಾರೆ ಅದನ್ನು ನಿಶಾನೆ ಪಿ-38 ಎಂದು ಗುರುತಿಸಲಾಗಿದೆ. ಉತ್ತರ ದಿನಾಂಕ :21/03/2022 ನಿಶಾನೆ ಪಿ-38 ಎಂದು ಗುರುತಿಸಲಾಗಿದೆ ಮತ್ತು ರಸೀದಿಗಳ ದೃಢೀಕೃತ ನಕಲುಗಳನ್ನು ನಿಶಾನೆ ಪಿ-38 (ಎ) ದಿಂದ 38 (ಸಿ) ಎಂದು ಗುರುತಿಸಲಾಗಿದೆ. ಅದೇರೀತಿ ಯಾರು ಯಾರಿಗೆ ಸರಬರಾಜು ಮಾಡಿದ್ದಾರೆ ಎಂದು ಕೊಟ್ಟ ವಿವರಣೆಯನ್ನು ನಿಶಾನೆ ಪಿ-38 (ಡಿ ) ಎಂದು ಗುರುತಿಸಲಾಗಿದೆ.

27) ದಿನಾಂಕ :31/03/2022 ರಂದು ಚಾ.ಸಾ.-2 ರವರು ಆರೋಪಿ ಎ1 ರಿಂದ ದಿನಾಂಕ 21/03/2022 ರ ಉತ್ತರವನ್ನು ಸ್ವೀಕರಿಸಿದರು. ಅದರಲ್ಲಿ KEPSIMET Tablets ಗಳನ್ನು ಎ2 ಸಂಸ್ಥೆ, ಮೆ|| ಬರ್ಕ್ ಮತ್ತು ಮಾರ್ ಫಾರ್ಮಾಸ್ಯುಟಿಕಲ್ಸ್, ಕೋಯಂಬತ್ತೂರು ಇವರಿಂದ Invoice No.GST-058 dated 19/03/2021, GST-119 dated 04/06/2021, GST-131 dated 29/06/2021 & GST-134 dated 23/07/2021 ರಲ್ಲಿ ಖರೀದಿಸಿರುವುದಾಗಿ ತಿಳಿಸಿರುತ್ತಾರೆ.

ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಶಾನೆ ಪಿ–39 ಎಂದು ಗುರುತಿಸಲಾಗಿದೆ ಮತ್ತು ರಸೀದಿಗಳ ದೃಢೀಕೃತ ನಕಲುಗಳನ್ನು ನಿಶಾನೆ ಪಿ–39 (ಎ) ದಿಂದ 39 (ಡಿ) ಎಂದು ಗುರುತಿಸಲಾಗಿದೆ. ಅದೇರೀತಿ ಸರಬರಾಜು ವಿವರಣೆಯನ್ನು ನಿಶಾನೆ ಪಿ–39 (ಇ) ಎಂದು ಗುರುತಿಸಲಾಗಿದೆ.

28) ದಿನಾಂಕ: 31/03/2022 ರಂದು ಚಾ.ಸಾ.–2 ಅವರು ಸೆಕ್ಷನ್ 23(4)(iii) ಮತ್ತು 25(2) ಅಡಿಯಲ್ಲಿ KEPSMIET Tablets, B.No. KTSM2002 ಔಷಧದ ಫಾರ್ಮ್–13 ರ ಪ್ರತಿಯೊಂದಿಗೆ ನೋಟಿಸನ್ನು ಎ2 ಸಂಸ್ಥೆ, ಮೆ|| ಬರ್ಕ್ ಮತ್ತು ಮಾರ್ ಫಾರ್ಮಾಸ್ಯುಟಿಕಲ್ಸ್ ಕೋಯಂಬತ್ತೂರು ಇವರಿಗೆ ಆರಪಿಎಡಿ ಮೂಲಕ ಕಳುಹಿಸಿದ್ದು , ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ನೋಟಿಸನ್ನು ನಿಶಾನೆ ಪಿ–40 ಎಂದು ಗುರುತಿಸಲಾಗಿದೆ.

29) ದಿನಾಂಕ: 31/03/2022 ರಂದು ಚಾ.ಸಾ.–2 ಅವರು ಸೆಕ್ಷನ್ 23(4)(iii) ಮತ್ತು 25(2) ಅಡಿಯಲ್ಲಿ KEPSI–50 Tablets, B.No. KT50–2001 ಔಷಧದ ಫಾರ್ಮ್–13 ರ ಪ್ರತಿಯೊಂದಿಗೆ ನೋಟಿಸನ್ನು ಎ2 ಸಂಸ್ಥೆ, ಮೆ|| ಬರ್ಕ್ ಮತ್ತು ಮಾರ್ ಫಾರ್ಮಾಸ್ಯುಟಿಕಲ್ಸ್ ಕೋಯಂಬತ್ತೂರು ಇವರಿಗೆ ಆರಪಿಎಡಿ ಮೂಲಕ ಕಳುಹಿಸಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ನೋಟಿಸನ್ನುನಿಶಾನೆ ಪಿ–41 ಎಂದು ಗುರುತಿಸಲಾಗಿದೆ.

30) ದಿನಾಂಕ: 12/04/2022 ರಂದು ಮೆ|| ಕೆಪ್ಲಿಕ್ ಫಾರ್ಮಾಸ್ಯುಟಿಕಲ್ಸ್ ಪಾಲುದಾರ ಶ್ರೀ ರಾಘವ ಗುಪ್ತಾ (ಚಾ.ಸಾ.–12) ಅವರು ಸಹಾಯಕ ಔಷಧ ನಿಯಂತ್ರಕರ ಕಚೇರಿ, ಧಾರವಾಡ ಸರ್ಕಲ್, ಹುಬ್ಬಳ್ಳಿಗೆ ಭೇಟಿ ನೀಡಿ, ಸದರಿ ಔಷಧಿಗಳನ್ನು ತಯಾರಿಸಿರುವ ಬಗ್ಗೆ ಅನುಮಾನ ವ್ಯಕ್ತಪಡಿಸಿ, ಸ್ವಂತ ಕಂಪನಿಯಲ್ಲಿ ತಯಾರಿಸಿದ ನಿಯಂತ್ರಣ ಮಾದರಿಯೊಂದಿಗೆ ಮಾದರಿ ಭಾಗಗಳನ್ನು ಹೋಲಿಸಿ, ಅದನ್ನು ತಮ್ಮ ಕಂಪನಿ ತಯಾರಿಸಿಲ್ಲ ಎಂದು ಹೇಳಿ ಸದರಿ ಔಷಧಿಗಳು ಮತ್ತು ನಿಯಂತ್ರಣ ಮಾದರಿಗಳ ನಡುವಿನ ವ್ಯತ್ಯಾಸವನ್ನು ಸಲ್ಲಿಸಿದರು ಮತ್ತು ಸದರಿ ಔಷಧಿಗಳ ವಿಶ್ಲೇಷಣಾ ವರದಿಗಳನ್ನು ಚಾಲೆಂಜ್ ಮಾಡುವುದನ್ನು ಹಿಂಪಡೆಯುವುದಾಗಿ ತಿಳಿಸಿದರು. ಸಾಕ್ಷಿಯು ದಿಃ 12–4–2022 ರಂದು ಆ ಔಷದಿಗಳನ್ನು ಹೋಲಿಕೆಗಾಗಿ ಮತ್ತು ಗುರುತಿಸುವುದಕ್ಕಾಗಿ ಮತ್ತು ಅದರ ಬಗ್ಗೆ ಅಭಿಪ್ರಾಯ ಕೊಡುವುದಕ್ಕೆ ತೋರಿಸಬೇಕೆಂದು ಹೇಳಿ ನೀಡಿದ ಮನವಿ ಈಗ ನೋಡುತ್ತಿದ್ದೇನೆ. ಸಾಕ್ಷಿ ಗುರುತಿಸಿದ ದಾಖಲೆ ನಿಶಾನೆ ಪಿ–42 ಎಂದು ಗುರುತಿಸಲಾಗಿದೆ. ಅದೇರೀತಿ ಅದೇ ದಿನ ಇನ್ನೊಂದು ಪತ್ರ ಕೊಟ್ಟಿದ್ದು ಆ ಪತ್ರದಲ್ಲಿ ತಮ್ಮ ಕಂಪನಿಯ ಔಷದಿಗಳು ಮತ್ತು ನಿಯಂತ್ರಣ ಮಾದರಿಗಳ ನಡುವಿನ ವ್ಯತ್ಯಾಸವನ್ನು ನಮೂದು ಮಾಡಿ ಕೊಟ್ಟಿದ್ದು ಆ ದಾಖಲೆ ಈಗ ನಾನು ನೋಡುತ್ತಿದ್ದೇನೆ ಅದನ್ನು ನಿಶಾನೆ ಪಿ–42 (ಎ) ಎಂದು ಗುರುತಿಸಲಾಗಿದೆ. ಅದರ ಜೊತೆಗೆ ಕೊಟ್ಟ ಫಾರ್ಮ 28 ರ ದೃಡೀಕೃತ ನಕಲು ನಿಶಾನೆ ಪಿ–42 (ಬಿ) ಎಂದು ಮತ್ತು ಫಾರ್ಮ ನಂಃ 25 42 (ಸಿ) ಎಂದು ಅದೇರೀತಿ ಔಷಧಿಗಳ ವಿವರದ ದೃಡೀಕೃತ ನಕಲು 42 (ಡಿ)ಎಂದು ಮತ್ತು ಈ ಬಗ್ಗೆ ಕಂಪ್ಯೂಟರನಲ್ಲಿ ತೆಗೆದ

ಫೋಟೊಗಳನ್ನು ಈ ಮೇಲ್ ಮೂಲಕ ಪಡೆದುಕೊಂಡಿರುವುದನ್ನು ಸಾಕ್ಷಿ ಗುರುತಿಸಿದ್ದುಅದನ್ನು ನಿಶಾನೆ ಪಿ-42(ಇ) ಎಂದು ಅದೇರೀತಿ ತಾವು ದೂರು ಕೊಟ್ಟಿರುವುದಾಗಿ ಹೇಳಿ ಕಂಪ್ಯೂಟರ ಮೂಲಕ ತೆಗೆದ ದಾಖಲೆಯ ದೃಢೀಕೃತ ನಕಲನ್ನು ನಿಶಾನೆ ಪಿ-42 (ಎಫ್ ) ಎಂದು ಮತ್ತು ಈ ಮೇಲ್ ಮೂಲಕ ಪಡೆದುಕೊಂಡಿರುವ ಇನ್ನೊಂದು ದಾಖಲೆಯನ್ನು ನಿಶಾನೆ ಪಿ-42 (ಜಿ) ಎಂದು ಮತ್ತು ಪ್ಯಾನ್ ಕಾರ್ಡ ದೃಢೀಕೃತ ನಕಲುಗಳು ಮತ್ತು ಕಂಪನಿಯ ಇತರೇ ಡಿಟೇಲಗಳನ್ನು ಒಟ್ಟು ಸೇರಿಸಿ ನಿಶಾನೆ ಪಿ-42 (ಹೆಚ್ ) ಎಂದು ಗುರುತಿಸಲಾಗಿದೆ (ಪುಟ 275 ರಿಂದ 289 ).

31) ದಿನಾಂಕ: 25/04/2022 ರಂದು ಚಾ.ಸಾ.-2 ಅವರು KEPSMIET Tablets, B.No. KTSM2002 ಔಷಧದ ಕುರಿತು ತನಿಖಾ ವರದಿಯನ್ನು ಔಷಧ ನಿಯಂತ್ರಕರಿಗೆ ಸಲ್ಲಿಸಿ, ಎ2 ಸಂಸ್ಥೆಯಲ್ಲಿ ತನಿಖೆ ನಡೆಸಲು ಅನುಮತಿ ಕೋರಿರುತ್ತಾರೆ. ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಆ ವರದಿಯನ್ನು ನಿಶಾನೆ ಪಿ-43 ಎಂದು ಗುರುತಿಸಲಾಗಿದೆ.

32) ದಿನಾಂಕ: 25/04/2022 ರಂದು, ಚಾ.ಸಾ.-2 ಅವರು KEPSI-50 Tablets, B.No. KT50-2001 ಔಷಧದ ಕುರಿತು ತನಿಖಾ ವರದಿಯನ್ನು ಔಷಧ ನಿಯಂತ್ರಕರಿಗೆ ಸಲ್ಲಿಸಿ, ಎ2 ಸಂಸ್ಥೆಯಲ್ಲಿ ತನಿಖೆ ನಡೆಸಲು ಅನುಮತಿ ಕೋರಿರುತ್ತಾರೆ. ಸಾಕ್ಷಿಯು ನೋಡಿ ಗುರುತಿಸಿದ ವರದಿಯನ್ನು ನಿಶಾನೆ ಪಿ-44 ಎಂದು ಗುರುತಿಸಲಾಗಿದೆ.

33) ದಿನಾಂಕ: 22/08/2022 ರಂದು ಚಾ.ಸಾ.-2 ಅವರು ಔಷಧ ನಿಯಂತ್ರಕರಿಂದ ಪತ್ರ ವನ್ನು ಸ್ವೀಕರಿಸಿದ್ದು, 'ನಕಲಿ ಔಷಧಿಗಳ' ಪೂರೈಕೆಗೆ ಸಂಬಂಧಿಸಿದಂತೆ ಎ2 ಸಂಸ್ಥೆಯಲ್ಲಿ ತನಿಖೆ ನಡೆಸಲು ಸೂಚಿಸಿರುವ ಪತ್ರ ದಿನಾಂಕ : 16/08/2022 ವನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನೋಡಿ ಗುರುತಿಸಿದ ಪತ್ರ ದಿನಾಂಕ: 16/08/2022 ವನ್ನು ನಿಶಾನೆ ಪಿ-45 ಎಂದು ಗುರುತಿಸಲಾಗಿದೆ.

34) ದಿನಾಂಕ : 15/09/2022 ರಂದು, ಚಾ.ಸಾ.-2 ಅವರು ಕನ್ಸೈನ್ಮೆಂಟ್ ನಂ. CJB511547004 ದಿನಾಂಕ 13/04/2021, CJB5116614300 ದಿನಾಂಕ 04/05/2021 ಮತ್ತು CJB511927129 ದಿನಾಂಕ 05/06/2021 ರ ಬಗ್ಗೆ ಮಾಹಿತಿ ನೀಡಲು ದಿ ಪ್ರೊಫೆಷನಲ್ ಕೊರಿಯರ್ಸ್, ಕೆಐಎಂಎಸ್ ಹಿಂಭಾಗ, ಹುಬ್ಬಳ್ಳಿ ಕಚೇರಿಯ ವ್ಯವಸ್ಥಾಪಕ ಶ್ರೀ ಕೆ. ಬಾಬು (ಚಾಸಾ13) ಇವರಿಗೆ ಪತ್ರವನ್ನು ನೀಡಿ ಸ್ವೀಕೃತಿ ಪಡೆದಿರುತ್ತಾರೆ. ಸಾಕ್ಷಿಯು ನೋಡಿ ಗುರುತಿಸಿದ ಪತ್ರವನ್ನು ನಿಶಾನೆ ಪಿ-46 ಎಂದು ಗುರುತಿಸಲಾಗಿದೆ.

35) ದಿನಾಂಕ: 16/09/2022 ರಂದು ಚಾ.ಸಾ.–13 ರವರು ತಮ್ಮ ಉತ್ತರದಲ್ಲಿ, ಸದರಿ ಕನ್ಸೈನ್ಮೆಂಟ್ಗಳು ತಮ್ಮ ಕೋಯಂಬತ್ತೂರು ಕಚೇರಿಯಿಂದ ಸ್ವೀಕರಿಸಿದ್ದು, ಎ1 ಸಂಸ್ಥೆ, ಮೆ|| ನಂದಿಕಾ ಹೆಲ್ತ್‌ಕೇರ್, ಹುಬ್ಬಳ್ಳಿಗೆ ತಲುಪಿಸಲಾಗಿದೆ ಎಂದು ತಿಳಿಸಿದ್ದು, ವಿವರಗಳನ್ನು ಸಲ್ಲಿಸಿರುತ್ತಾರೆ. ಸಾಕ್ಷಿಯು ನೋಡಿ ಗುರುತಿಸಿದ ದಿನಾಂಕ: 16/09/2022ರ ಉತ್ತರ ಪತ್ರ ನಿಶಾನೆ ಪಿ–47 ಎಂದು ಗುರುತಿಸಲಾಗಿದೆ ಮತ್ತು Delivery Sheet ದಾಖಲೆಗಳನ್ನು ನಿಶಾನೆ ಪಿ–47 (ಎ) ಎಂದು ಗುರುತಿಸಲಾಗಿದೆ.

36. ದಿನಾಂಕ 22/11/2022 ರಂದು ಡಿಸಿ ತಮಿಳುನಾಡು ರವರಿಗೆ ಡಿಸಿ ಕರ್ನಾಟಕ ರವರು ದಿ 15–11–2022 ರಪತ್ರವನ್ನು ಬರೆದು ಆ ಪತ್ರದಲ್ಲಿ ಡ್ರಗ್ ಇನ್ಸಪೆಕ್ಟರ ಹುಬ್ಬಳ್ಳಿ ಚಾಸಾ–2 ರವರು ತನಿಖೆಗಾಗಿ 2 ನೇ ಆರೋಪಿ ಸಂಸ್ಥೆಗೆ ಭೇಟಿ ಮಾಡುವುದರಿಂದ ಡ್ರಗ್ ಇನ್ಸಪೆಕ್ಟರ ಚಾ.ಸಾ.–2 ರವರಿಗೆ ಸಂಪೂರ್ಣ ಸಹಕಾರ ನೀಡಬೇಕೆಂದು ಪತ್ರ ಬರೆದಿರುತ್ತಾರೆ. ಸಾಕ್ಷಿ ಆ ಪತ್ರ ನೋಡಿ ಗುರುತಿಸಿದ್ದು ಅದನ್ನು ನಿಶಾನೆ ಪಿ–48 ಎಂದು ಗುರುತಿಸಲಾಗಿದೆ.

37. ದಿನಾಂಕ: 16/11/2022 ರಂದು ಚಾ.ಸಾ.–2 ರವರು ಕೊಯಿಂಬತ್ತೂರು ಸಹಾಯಕ ನಿರ್ದೇಶಕರು, ಔಷಧ ನಿಯಂತ್ರಣ ಇಲಾಖೆಯವರಿಗೆ ಆರೋಪಿ–2 ಸಂಸ್ಥೆಯಲ್ಲಿ ತನಿಖೆ ಕೈಗೊಳ್ಳಲು ಔಷಧ ಪರಿವೀಕ್ಷಕರನ್ನು ನಿಯೋಜಿಸಲು ಕೋರಿ ಪತ್ರವನ್ನು ನೀಡಿ ಸ್ವೀಕೃತಿ ಪಡೆದಿರುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ ದಿನಾಂಕ: 16/11/2022 ಪತ್ರವನ್ನು ನಿಶಾನೆ ಪಿ–49 ಎಂದು ಗುರುತಿಸಲಾಗಿದೆ.

38. ದಿನಾಂಕ: 17/11/2022 ರಂದು ಚಾ.ಸಾ.–2 ರವರು ಪೊಲೀಸ್ ಸಬ್ ಇನ್ಸಪೆಕ್ಟರ್ ಸೇಲಂ, ರವರಿಗೆ ಆರೋಪಿ–2 ಇವರಿಗೆ ಸಂಬಂಧಿಸಿದಂತೆ ಮನೆ ವಿಳಾಸದಲ್ಲಿ ತನಿಖೆ ಕೈಗೊಳ್ಳಲು ಸಹಕರಿಸಬೇಕೆಂದು ಕೋರಿ ಪತ್ರವನ್ನು ಸಲ್ಲಿಸಿ, ಸ್ವೀಕೃತಿ ಪಡೆದಿರುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ ಪತ್ರ ದಿನಾಂಕ: 16/11/2022 ನ್ನು ನಿಶಾನೆ ಪಿ–50 ಎಂದು ಗುರುತಿಸಲಾಗಿದೆ.

39. ದಿನಾಂಕ: 17/11/2022 ರಂದು ಚಾ.ಸಾ.–2 ರವರು ಆರೋಪಿ–2 ಇವರ ವಾಸಸ್ಥಳದಲ್ಲಿ ಕೈಗೊಂಡ ಸ್ಥಳ ಪರಿಶೀಲನಾ ವರದಿಯನ್ನು ಸಾಕ್ಷಿಯು ನೋಡಿ ಗುರುತಿಸಿ, ಅದನ್ನು ನಿಶಾನೆ ಪಿ–51 ಎಂದು ಗುರುತಿಸಲಾಗಿದೆ.

40. ದಿನಾಂಕ: 17/11/2022 ರಂದು ಚಾ.ಸಾ.–2 ರವರು ಚಾ.ಸಾ.–14 ಶ್ರೀಮತಿ ನಾಗಲಕ್ಷ್ಮಿ, ಔಷಧ ಪರಿವೀಕ್ಷಕರು ಕೊಯಿಂಬತ್ತೂರು, ಸೌಥ್ ಝೋನ್, ರವರ ಜೊತೆ ಆರೋಪಿ–2 ಇವರಿಂದ ಹೇಳಿಕೆಯನ್ನು

ಪಡೆದಿರುತ್ತಾರೆ. ಇದರಲ್ಲಿ ಅವರು ಕೆಪ್ಸಿಮೆಟ್ ಮಾತ್ರೆಗಳು ಮತ್ತು ಕೆಪ್ಸಿ-50 ಮಾತ್ರೆಗಳನ್ನು ಮೆ/ ಗನ್ ಫಾರ್ಮಾ, ಚೆನ್ನೈ ಮತ್ತು ಮೆ/ಸ ಆಪಲ್ ಫಾರ್ಮಾ, ಮಧುರೈ ಇವರಿಂದ ಖರೀದಿಸಿ, ಎ 1 ಸಂಸ್ಥೆ, ಮೆ/ ನಂದಿಕಾ ಹೆಲ್ತ್‌ಕೇರ್, ಕೊಪ್ಪಿಕರ್ ರಸ್ತೆ, ಹುಬ್ಬಳ್ಳಿ-580020 ಗೆ ಮಾರಾಟ ಮಾಡಿರುವುದಾಗಿ ತಿಳಿಸಿದರು. ಚಾ.ಸಾ.-2 ರವರು ದಿನಾಂಕ 19/03/2021 ರ ಇನವಾಯಿಸ್ ಸಂಖ್ಯೆ GST-058 , ದಿನಾಂಕ 04/06/2021ರ ಇನವೈಸ ಸಂಖ್ಯೆ GST -119, ದಿನಾಂಕ 29/06/2021ರ ಇನವೈಸ ಸಂಖ್ಯೆ GST -131, ದಿನಾಂಕ 23/07/2021 ರ ಇನವೈಸ ಸಂಖ್ಯೆ GST -134, ಮತ್ತು ದಿನಾಂಕ 14/04/2021ರ ಇನವೈಸ ಸಂಖ್ಯೆ GST -073, ನ್ನು ತೋರಿಸಿದ್ದು , ಅವುಗಳು ತಮ್ಮಗೆ ಸಂಬಂಧಿಸಿಲ್ಲ ಮತ್ತು ತಮ್ಮ ಇನವಾಯಿಸ್ ಗಳ (Format) ವಿಭಿನ್ನವಾಗಿದೆ ಎಂದು ಆರೋಪಿ ಎ 2 ತಿಳಿಸಿದರು.

41. ದಿನಾಂಕ: ೧೮/೧೧/೨೦೨೨ ರಂದು , ಆರೋಪಿ ಎ೨ ಅವರು ಚಾ.ಸಾ-೨ ಇವರಿಗೆ ಉತ್ತರವನ್ನು ಸಲ್ಲಿಸಿದ್ದು, ಅದರ ಜೊತೆ ಮೆ: ಆಪಲ್ ಫಾರ್ಮ, ಮಧುರೈ, ಇವರ ದಿನಾಂಕ: ೧೭/೦೮/೨೦೨೦ ರ ಇನವಾಯಿಸ್ ಸಂಖ್ಯೆಗಳು: ೩೭, ದಿನಾಂಕ: ೨೪/೦೮/೨೦೨೦ರ ಇನವೈಸ ನಂ.೫೩, ದಿನಾಂಕ: ೨೨/೦೮/೨೦೨೦ರ ಇನವೈಸ ನಂ. ೪೯, ದಿನಾಂಕ: ೦೫/೦೯/೨೦೨೦ ರ ಇನವೈಸ ನಂ.೧೦೨, ಮತ್ತು ದಿನಾಂಕ: ೧೧/೦೯/೨೦೨೦ ರ ಇನವೆಎಸ ನಂ.೧೨೦ ಗಳನ್ನು ಒದಗಿಸಿದರು. ಅದರಲ್ಲಿ ಖರೀದಿದಾರರ ಹೆಸರು : ಪಿಎಂಬಿಜೆಕೆ, ಪೊಲ್ಲಾಚಿ, ೬೧೭, ಅಂಗಡಿ ನಂ.೫, ಪಶ್ಚಿಮ ಮುಖ, ಮೊದಲ ಮಹಡಿ, ಕಾರ್ಪೊರೇಷನ್ ಕಾಂಪ್ಲೆಕ್ಸ್, ಅಣ್ಣಾ ಬಸ್ ನಿಲ್ದಾಣ, ಪೊಲ್ಲಾಚಿ, ಎಂದು ಇರುತ್ತದೆ. ಆರೋಪಿ-೨ ರವರು ಸದರಿ ಔಷಧಗಳನ್ನು ಪಿಎಂಬಿಜೆಕೆ,ಪೊಲ್ಲಾಚಿ, ಇವರಿಂದ ಬಿಲ್ ಇಲ್ಲದೇ ಖರೀದಿ ಮಾಡಿರುವುದಾಗಿ ಉತ್ತರದಲ್ಲಿ ತಿಳಿಸಿದರು. ಸಾಕ್ಷಿಯು ನೋಡಿ ಗುರುತಿಸಿದ ಉತ್ತರವನ್ನು ನಿಶಾನೆ ಪಿ-52 ಎಂದು ಗುರುತಿಸಲಾಗಿದೆ ಹಾಗೂ ಇವಾಯಿಸ್ ದೃಢೀಕೃತ ನಕಲನ್ನು ನಿಶಾನೆ ಪಿ-52 ಎ ಯಿಂದ ನಿಶಾನೆ ಪಿ-52(ಇ ) ಎಂದು ಗುರುತಿಸಲಾಗಿದೆ. ಅದೇರೀತಿ ಜಿ ಎಸ್ ಟಿ ದೃಡೀಕೃಸ ನಕಲು ನಿಶಾನೆ ಪಿ-52 (ಎಫ್) ಎಂದು ಗುರುತಿಸಲಾಗಿದೆ.

**ಮುಂದಿನ ವಿಚಾರಣೆಯನ್ನು ಮುಂದೂಡಲಾಯಿತು.**

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು). ಓ. ಹೇ. ಕೇ. ಸರಿ ಇದೆ.

**(ಬಿ. ಎಸ್. ಭಾರತಿ)**
ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ
ನ್ಯಾಯಾಧೀಶರು, ಧಾರವಾಡ.

**ಸಾಕ್ಷಿಯನ್ನು ದಿಃ 24-4-2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ವಿಚಾರಣೆಃ**

42. ದಿನಾಂಕ: 18/11/2022 ರಂದು ಚಾ.ಸಾ-2 ರವರು ದಿ ಪ್ರೊಫೆಷನಲ್ ಕೊರಿಯರ್ಸ್ ಕಚೇರಿ, 533-ಸಿ, ಅಭಿ ಬಿಲ್ಡಿಂಗ್ಸ್, ಅವಿನಾಶಿ ರಸ್ತೆ, ಪಿ.ಎನ್. ಪಾಳ್ಯಂ, ಕೋಯಂಬತ್ತೂರನಲ್ಲಿ ಇರುವ ಮ್ಯಾನೇಜರ್ (ಚಾ.ಸಾ-15 ) ಇವರಿಗೆ ದಿನಾಂಕ 13/04/2021 ರ ಕನ್ಸೈನ್ಮೆಂಟ್ ನಂ. CJB 511547004, ದಿನಾಂಕ 04/05/2021 ರ ಕನ್ಸೈನ್ಮೆಂಟ್ ನಂ. CJB 511614300 ಮತ್ತು ದಿನಾಂಕ 05/06/2021 ರ ಕನ್ಸೈನ್ಮೆಂಟ್ ನಂ CJB 11927129 ಬಗ್ಗೆ ಮಾಹಿತಿ ನೀಡಲು ಕೋರಿ, ಪತ್ರವನ್ನು ನೀಡಿ, ಸ್ವೀಕೃತಿ ಪಡೆದಿರುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ ದಿನಾಂಕ: 18/11/2022 ರ ಪತ್ರವನ್ನು ನಿಶಾನೆ ಪಿ-53 ಎಂದು ಗುರುತಿಸಲಾಗಿದೆ.

43. ದಿನಾಂಕ: 18/11/2022 ರಂದು ಚಾ.ಸಾ-15 ಅವರು ಉತ್ತರವನ್ನು ನೀಡಿದ್ದು ತಮ್ಮ ಉತ್ತರದಲ್ಲಿ, ಸದರಿ ಕನ್ಸೈನ್ಮೆಂಟ್ಗಳನ್ನು ಎ2 ಸಂಸ್ಥೆಯಾದಂತ ಮೆ: ಬರ್ಕ್ ಮತ್ತು ಮಾರ್ ಫಾರ್ಮಾಸ್ಯುಟಿಕಲ್ಸ್ ಕೋಯಂಬತ್ತೂರು ಇವರು, ಎ1 ಸಂಸ್ಥೆ ಮೆ: ನಂದಿಕಾ ಹೆಲ್ತ್ಕೇರ್, ಹುಬ್ಬಳ್ಳಿಗೆ ಬುಕ್ ಮಾಡಿರುವುದಾಗಿ ದೃಢಪಡಿಸಿದರು. ಚಾ.ಸಾ.-15 ರವರು ಉತ್ತರದೊಂದಿಗೆ ಎ2 ಸಂಸ್ಥೆಗೆ ನೀಡಿರುವ ಬಿಲ್ಗಳ ದೃಢೀಕೃತ ಪ್ರತಿ ಹಾಗೂ ಶಿಫ್‌ಮೆಂಟ್ ಸ್ಟೇಟಮೆಂಟ್ ವಿವರಗಳನ್ನು ಸಲ್ಲಿಸಿರುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ ದಿನಾಂಕ: 18/11/2022 ರ ಉತ್ತರವನ್ನು ನಿಶಾನೆ ಪಿ-54 ಎಂದು ಮತ್ತು ದೃಢೀಕೃತ ಬಿಲ್‌ಗಳನ್ನು ನಿಶಾನೆ ಪಿ-54 ಎ ರಿಂದ 54 ಸಿ ಎಂದು ಅವರು ಒದಗಿಸಿದ ಪೇಮೆಂಟ ಡಿಟೇಲ್ಸ ನಿಶಾನೆ ಪಿ-54 ಡಿ ಎಂದು ಹಾಗೂ ಶಿಫ್ ಮೆಂಟ್ ಸ್ಟೇಟಮೆಂಟ್ ವಿವರಗಳನ್ನು ನಿಶಾನೆ ಪಿ-54 ಇ ಎಂದು ಕ್ರಮವಾಗಿ ಗುರುತಿಸಲಾಗಿದೆ.

44. ದಿನಾಂಕ 18/11/2022 ರಂದು ಚಾ.ಸಾ-2 ಅವರು ಇಂಡಸ್‌ಇಂಡ್, ಸಿಒವಿ ಇಎಕ್ಸ್ಟಿ ಸಿಒ, ಕಿಕಾನಿ ಚಾರಿಟಿ ನಂ.1, ಕೃಷ್ಣಸ್ವಾಮಿ ಮುರಳೀಯಾರ್ ರಸ್ತೆ, ಆರ್.ಎಸ್. ಪುರಂ, ಕೋಯಂಬತ್ತೂರು-641002, ಬ್ಯಾಂಕ್ ವ್ಯವಸ್ಥಾಪಕರಿಗೆ ಪತ್ರವನ್ನು ನೀಡಿ, ಜನವರಿ-2021 ರಿಂದ ಅಕ್ಟೋಬರ್-2021 ರ ಅವಧಿಯ ಎ2 ಸಂಸ್ಥೆ, ಮೆ: ಬರ್ಕ್ ಮತ್ತು ಮಾರ್ ಫಾರ್ಮಾಸ್ಯುಟಿಕಲ್ಸ ಬ್ಯಾಂಕ್ ಖಾತೆ ವಿವರಗಳನ್ನು ಒದಗಿಸಲು ಕೋರಿ ಸ್ವೀಕೃತಿ ಪಡೆದಿರುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ ದಿನಾಂಕ: 18/11/2022 ರ ಪತ್ರವನ್ನು ನಿಶಾನೆ ಪಿ-55 ಎಂದು ಗುರುತಿಸಲಾಗಿದೆ.

45. ಶ್ರೀಮತಿ ನಾಗಲಕ್ಷ್ಮಿ, ಡ್ರಗ್ಸ್ ಇನ್ಸ್ಪೆಕ್ಟರ್, ಕೊಯಂಬತ್ತೂರು–1 ರೇಂಜ್ (ಚಾ.ಸಾ–14) ಅವರು ದಿನಾಂಕ 18/11/2022 ರ ಪತ್ರವನ್ನು ಚಾ.ಸಾ–2 ಅವರಿಗೆ ನೀಡಿ, ಅದರೊಂದಿಗೆ ಎ2 ಸಂಸ್ಥೆಗೆ ಸಂಬಂಧಪಟ್ಟ ತನಿಖಾ ವರದಿ ಮತ್ತು ಎ2 ಸಂಸ್ಥೆಗೆ ಸಂಬಂಧಿಸಿದ ಪರವಾನಗಿಗಳು ಮತ್ತು ದಾಖಲೆಗಳ ದೃಢೀಕರಿಸಿದ ಜೆರಾಕ್ಸ್ ಪ್ರತಿಗಳೊಂದಿಗೆ ಸಲ್ಲಿಸಿದರು. ಸಾಕ್ಷಿ ನೋಡಿ ಗುರುತಿಸಿದ ದಿನಾಂಕ: 18/11/2022 ರ ಪತ್ರವನ್ನು ನಿಶಾನೆ ಪಿ–56 ಎಂದು ಗುರುತಿಸಲಾಗಿದೆ ಮತ್ತು ದೃಢೀಕರಿಸಿದ ದಾಖಲೆಗಳನ್ನು ಒಟ್ಟಿಗೆ ( ಪುಟ–337 ರಿಂದ 384) ನಿಶಾನೆ ಪಿ–56 (ಎ) ಎಂದು ಗುರುತಿಸಲಾಗಿದೆ.

46. ದಿನಾಂಕ 19/11/2022 ರಂದು ಚಾ.ಸಾ–2 ಅವರು ಶ್ರೀ ಎನ್. ರಾಜೇಶ್ ಕುಮಾರ್ ಡ್ರಗ್ಸ್ ಇನ್ಸ್ಪೆಕ್ಟರ್ ಪೊಲ್ಲಾಚಿ, ಕೋಯಂಬತ್ತೂರು, ಅವರೊಂದಿಗೆ, ಪ್ರಧಾನ ಮಂತ್ರಿ ಭಾರತೀಯ ಜನೌಷಧಿ ಕೇಂದ್ರ, ಪೊಲ್ಲಾಚಿ, ಇಲ್ಲಿ ಮೆ: ಆಪಲ್ ಫಾರ್ಮಾ, ಮಧುರೈ ಇವರು ನೀಡಿದ ದಿನಾಂಕ 17/08/2020 ರ ಇನವಾಯಿಸ್ ಸಂಖ್ಯೆ:37, ದಿನಾಂಕ 22/08/2020 ರ ಇನವಾಯಿಸ್ ಸಂಖ್ಯೆ: 49, ದಿನಾಂಕ 24/08/2020 ರ ಇನವಾಯಿಸ್ ಸಂಖ್ಯೆ : 53, ದಿನಾಂಕ 05/09/2020 ರ ಇನವಾಯಿಸ್ ಸಂಖ್ಯೆ: 102, ದಿನಾಂಕ 11/09/2020 ರ ಇನವಾಯಿಸ್ ಸಂಖ್ಯೆ: 121 ಅಡಿಯಲ್ಲಿ ಔಷಧಿಗಳ ಪೂರೈಕೆಗೆ ಸಂಬಂಧಿಸಿದಂತೆ ತನಿಖೆ ಮಾಡಲಾಗಿ, ಪ್ರಧಾನ ಮಂತ್ರಿ ಭಾರತೀಯ ಜನೌಷಧಿ ಕೇಂದ್ರ, ಪೊಲ್ಲಾಚಿ, ಮಾಲೀಕರು ಶ್ರೀ ಸುಂದರಂ ಪನ್ನೀರ್ಸೆಲ್ವಂ ರವರು (ಚಾ.ಸಾ 16) ಹೇಳಿಕೆಯನ್ನು ನೀಡಿದ್ದು, ಹೇಳಿಕೆಯಲ್ಲಿ ಮೆ: ಆಪಲ್ ಫಾರ್ಮಾ ಅವರಿಂದ ಯಾವುದೇ ಔಷಧಿಗಳನ್ನು ಖರೀದಿಸಿಲ್ಲ ಮತ್ತು ತಮ್ಮ ಅಂಗಡಿ ಹೆಸರು ಮತ್ತು ವಿಳಾಸವನ್ನು ದುರುಪಯೋಗಪಡಿಸಿಕೊಂಡಿದ್ದಾರೆಂದು ತಿಳಿಸಿರುತ್ತಾರೆ. ಅದರೊಂದಿಗೆ ದೃಡೀಕೃತ ಔಷಧ ಪರವಾನಿಗೆ ನಮೂನೆ–20, ನಮೂನೆ–21 ಹಾಗೂ ಅವರ ಆಧಾರ ಗುರುತಿನ ಚೀಟಿಯನ್ನು ಚಾ.ಸಾ.–2 ರವರಿಗೆ ನೀಡಿರುತ್ತಾರೆ. ಚಾ.ಸಾ–2 ರವರು ಶ್ರೀ ಎನ್. ರಾಜೇಶ್ ಕುಮಾರ್ ಡ್ರಗ್ಸ್ ಇನ್ಸ್ಪೆಕ್ಟರ್ ಪೊಲ್ಲಾಚಿ, ಕೋಯಂಬತ್ತೂರು, ಇವರೊಂದಿಗೆ, ಜಂಟಿ ಪರಿವೀಕ್ಷಣೆ ಮಾಡಿ ವರದಿಯನ್ನು ನೀಡಿರುತ್ತಾರೆ. ಅವರ ಹೇಳಿಕೆಯೊಂದಿಗೆ ಅವರು ಕೊಟ್ಟ ದೃಢೀಕೃತ ನಮೂನೆ–20 ನ್ನು ನಿಶಾನೆ –57 ಎಂದು ,ದೃಢೀಕೃತ ನಕಲು ನಮೂನೆ–21 ನ್ನು ನಿಶಾನೆ –57 ಎ ಹಾಗೂ ಸಾಕ್ಷಿದಾರರಾದ ಸುಂದರಮ್ ಪನ್ನೀರ ಸೆಲ್ವ ಅವರ ಆಧಾರ ಗುರುತಿನ ಚೀಟಿಯ ದೃಡಿಕೃತ ನಕಲನ್ನು ನಿಶಾನೆ ಪಿ –57 ಬಿ ಹಾಗೂ ದಿನಾಂಕ: 19/11/2022 ರ ಜಂಟಿ ಪರಿವೀಕ್ಷಣಾ ವರದಿಯನ್ನು ನಿಶಾನೆ ಪಿ –57 ಸಿ ಎಂದು ಗುರುತಿಸಿದೆ.

47. ದಿನಾಂಕ 19/11/2022 ರಂದು ಚಾ.ಸಾ–2 ಅವರು ಶ್ರೀ ಸಿ.ಎ. ಮುನಿಸ್ವಾಮಿ ಡ್ರಗ್ಸ್ ಇನ್ಸೆಕ್ಟರ್, ಮಧುರೈ ವೆಸ್ಟ ರೇಂಜ್ ಅವರೊಂದಿಗೆ, ಮೆ: ಆಪಲ್ ಫಾರ್ಮಾ, 1 ನೇ ಮಹಡಿ, ವಕೀಲ್ ನ್ಯೂ ಸ್ಟ್ರೀಟ್, ಸಿಮ್ಮಕ್ಕಲ್, ಮಧುರೈ ಇಲ್ಲಿ ತನಿಖೆ ನಡೆಸಿದರು. ಮೆ: ಆಪಲ್ ಫಾರ್ಮಾ ಮಾಲೀಕ ಶ್ರೀ ಕೆ.ಸಿ. ವೆಲ್ ಮೂರ್ಗನ್ (ಚಾ.ಸಾ– 17) ಅವರು ಹೇಳಿಕೆಯನ್ನು ನೀಡಿದ್ದು ಹೇಳಿಕೆಯಲ್ಲಿ ಕೆಪ್ಸಿಮೆಟ್, ಕೆಪ್ಸಿ–50 ಎಂಜಿ, ಮತ್ತು ಕೆಪ್ಸಿ–100 ಎಂಜಿ ಔಷಧಿಗಳನ್ನು ಮೆ: ಗನ್ ಫಾರ್ಮಾ, ಚೆನ್ನೈ, ಇವರಿಂದ ದಿನಾಂಕ: 07/08/2020 ರ ಇನವಾಯಿಸ್ ಸಂಖ್ಯೆ: 0048 ಮತ್ತು ದಿನಾಂಕ: 18/06/2020 ರ ಇನವಾಯಿಸ್ ಸಂಖ್ಯೆ 0012 ರ ಅಡಿಯಲ್ಲಿ ಖರೀದಿಸಿರುವುದಾಗಿ ತಿಳಿಸಿದರು. ಆರೋಪಿ ಅರುಣ್ ಕುಮಾರ್ (ಎ 2) ಅವರು ಈ ಔಷಧಿಗಳನ್ನು ಪಿಎಂಬಿಜೆಕೆ, ಪೊಲ್ಲಾಚಿ ಹೆಸರಿನಲ್ಲಿ ಸರಬರಾಜು ಮಾಡಲು ಬೇಡಿಕೆ ಇಟ್ಟಿದ್ದರಿಂದ ಸದರಿ ಔಷಧಗಳನ್ನು ದಿನಾಂಕ: 17/08/2020 ರ ಇನವಾಯಿಸ್ ಸಂಖ್ಯೆ 37, ದಿನಾಂಕ: 22/08/2020 ರ ಇನವಾಯಿಸ್ ಸಂಖ್ಯೆ : 49, ದಿನಾಂಕ: 24/08/2020 ರ ಇನವಾಯಿಸ್ ಸಂಖ್ಯೆ 53, ದಿನಾಂಕ: 05/09/2020 ರ ಇನವಾಯಿಸ್ ಸಂಖ್ಯೆ 102, ಮತ್ತು ದಿನಾಂಕ: 11/09/2020 ರ ಇನವಾಯಿಸ್ ಸಂಖ್ಯೆ 121 ರ ಅಡಿಯಲ್ಲಿ ಮಾರಾಟ ಮಾಡಿರುವುದಾಗಿ ಚಾ.ಸಾ–17 ರವರು ತಿಳಿಸಿದರು.

ಆ ಹೇಳಿಕೆಯೊಂದಿಗೆ ಅವರು ಕೊಟ್ಟ ದಾಖಲೆಗಳನ್ನು ಸಾಕ್ಷಿ ಗುರುತಿಸಿದ್ದು ಅದರಲ್ಲಿ ದೃಢೀಕೃತ ನಮೂನೆ–21 ಬಿ ನ್ನು ನಿಶಾನೆ –58 ಎ, ದೃಢೀಕೃತ ನಮೂನೆ–20 ಬಿ ನ್ನು ನಿಶಾನೆ –58 ಬಿ ಹಾಗೂ ದೃಢೀಕೃತ ಖರೀದಿ ರಶೀದಿ ದಿನಾಂಕ: 07/08/2020 ನ್ನು ನಿಶಾನೆ ಪಿ –58 ಸಿ ಎಂದು, ಖರೀದಿ ರಶೀದಿ ದಿನಾಂಕ: 18/06/2020 ನ್ನು ನಿಶಾನೆ ಪಿ –58 ಡಿ ಎಂದು, ಖರೀದಿ ರಶೀದಿ ದಿನಾಂಕ: 07/08/2020 ನಿಶಾನೆ ಪಿ –58 ಇ ಎಂದು ಗುರುತಿಸಿದೆ ಮತ್ತು ಮಾರಾಟ ರಶೀದಿ ಗಳನ್ನು (ಪುಟ ಸಂಖ್ಯೆ: 402 ರಿಂದ 411) ಒಟ್ಟಾರೆ ನಿಶಾನೆ ಪಿ –58 ಎಫ್ ಎಂದು ಹಾಗೂ ಮಾಲೀಕರ ಆಧಾರ ಕಾರ್ಡ ಗುರುತಿನ ಚೀಟಿಯ ದೃಢೀಕೃತ ನಕಲನ್ನು ನಿಶಾನೆ ಪಿ –58 ಜಿ ಎಂದು ಗುರುತಿಸಿದೆ.

48. ದಿನಾಂಕ 25/11/2022 ರಂದು ಚಾ.ಸಾ 2 ಅವರು ಮೆ: ಆಪಲ್ ಫಾರ್ಮಾ, ಮಧುರೈ, (ಚಾ.ಸಾ. 17) ಇವರಿಂದ ಅಂಚೆ ಕವರನ್ನು ಸ್ವೀಕರಿಸಿದರು. ಅದರಲ್ಲಿ ಚಾ.ಸಾ 17 ಅವರು ಪೊಲೀಸರಿಗೆ ನೀಡಿದ ತಮಿಳಿನಲ್ಲಿರುವ ದೂರಿನ ಪ್ರತಿ ದಿನಾಂಕ: 17/08/2021 ಮಾರಾಟ ರಶೀದಿಗಳು (ಪುಟ ಸಂಖ್ಯೆ: 417 ರಿಂದ 421) ಬ್ಯಾಂಕ್ ಲೆಡ್ಜರ್ ವಿವರಗಳು, ಮೆ: ಗನ್ ಫಾರ್ಮಾ (ಚಾ.ಸಾ 18) ಚೆನ್ನೈ ಅವರೊಂದಿಗೆ ಮಾಡಿದ ವಹಿವಾಟು ವಿವರಗಳು ,ಆರೋಪಿ ಎ 2 ಶ್ರೀ ಅರುಣ್ ಕುಮಾರ್ ಮಾರಾ ಅವರೊಂದಿಗೆ ಮಾಡಿದ ವಹಿವಾಟು

ವಿವರಗಳು , ಸೆಲ್ ಫೋನ್ ಸಿಡಿಆರ್ ವಿವರಗಳು ಮತ್ತು ಅವರ ಬ್ಯಾಂಕ್ ಖಾತೆ ವಿವರಗಳ ದೃಢೀಕೃತ ಪ್ರತಿಗಳನ್ನು ಕಳುಹಿಸಿರುತ್ತಾರೆ.

ದೂರಿನ ದೃಢೀಕೃತ ಪ್ರತಿ ದಿನಾಂಕ: 17/08/2021 ನಿಶಾನೆ ಪಿ –59 ಎ ಎಂದು ಗುರುತಿಸಿದೆ. ಮಾರಾಟ ರಶೀದಿಗಳು (ಪುಟ ಸಂಖ್ಯೆ 417 ರಿಂದ 421) ನಿಶಾನೆ ಪಿ–59 ಬಿ ಎಂದು ಗುರುತಿಸಿದೆ. ಬ್ಯಾಂಕ್ ಲೆಡ್ಜರ್ ವಿವರಗಳನ್ನು ನಿಶಾನೆ ಪಿ–59 ಸಿ ಎಂದು ಗುರುತಿಸಿದೆ. (ಚಾ.ಸಾ 18) ಅವರೊಂದಿಗೆ ಮಾಡಿದ ವಹಿವಾಟು ವಿವರಗಳನ್ನು ನಿಶಾನೆ ಪಿ–59 ಡಿ ಎಂದು ಗುರುತಿಸಿದೆ. ಆರೋಪಿ ಎ 2 ಅವರೊಂದಿಗೆ ಮಾಡಿದ ವಹಿವಾಟು ವಿವರಗಳನ್ನು ನಿಶಾನೆ ಪಿ –59 ಇ ಎಂದು ಗುರುತಿಸಿದೆ. ಸೆಲ್ ಫೋನ್ ಸಿಡಿಆರ್ ವಿವರಗಳು ನಿಶಾನೆ ಪಿ–59 ಎಫ್ ಎಂದು ಗುರುತಿಸಿದೆ ಮತ್ತು ಬ್ಯಾಂಕ್ ಖಾತೆ ವಿವರಗಳ ದೃಢೀಕೃತ ಪ್ರತಿಗಳನ್ನು ನಿಶಾನೆ ಪಿ –59 ಜಿ ಎಂದು ಗುರುತಿಸಿದೆ. ಅಂಚೆ ಕವರನ್ನು ನಿಶಾನೆ –ಪಿ 59 ಹೆಚ್ ಎಂದು ಗುರುತಿಸಿದೆ.

ಮುಂದಿನ ವಿಚಾರಣೆಯನ್ನು ಮುಂದೂಡಲಾಯಿತು.

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು). ಓ. ಹೇ. ಕೇ. ಸರಿ ಇದೆ.

**(ಬಿ. ಎಸ್. ಭಾರತಿ)**
ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ
ನ್ಯಾಯಾಧೀಶರು, ಧಾರವಾಡ.

**ಸಾಕ್ಷಿಯನ್ನು ದಿಃ 30–4–2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ವಿಚಾರಣೆಃ**

49. ದಿನಾಂಕ 21/11/2022 ರಂದು ಚಾ.ಸಾ–2 ಅವರು ಸಹಾಯಕ ನಿರ್ದೇಶಕರು ಚೆನ್ನೈ, ತಮಿಳನಾಡು ರಾಜ್ಯ ಇವರಿಗೆ ಮೆ: ಗನ್ ಫಾರ್ಮಾ, ಅಡ್ಯಾರ್, ಚೆನ್ನೈ ಸಂಬಂಧಿಸಿದಂತೆ ಔಷಧ ಪರವಾನಿಗೆಗಳು, ಸಂಘಟನೆ ವಿವರಗಳು, ಸಂಸ್ಥೆಗೆ ಸಂಬಂಧಪಟ್ಟ ಜವಾಬ್ದಾರಿಯುತ ವ್ಯಕ್ತಿಗಳ ಹೆಸರು ಮತ್ತು ವಿಳಾಸದ ಮಾಹಿತಿಯನ್ನು ನೀಡಲು ಕೋರಿ, ಪತ್ರವನ್ನು ನೀಡಿ ಸ್ವೀಕೃತಿ ಪಡೆದರು. ಸಾಕ್ಷಿ ನೋಡಿ ಗುರುತಿಸಿದ ದಿನಾಂಕ: 21/11/2022 ರ ಪತ್ರವನ್ನು ನಿಶಾನೆ ಪಿ–60 ಎಂದು ಗುರುತಿಸಲಾಗಿದೆ.

50. ದಿನಾಂಕ 21/11/2022 ರಂದು ಚಾ.ಸಾ–2 ಅವರು ಶ್ರೀ ಎಸ್. ಕೇಥರಿನಾಥನ್ ಡ್ರಗ್ಸ್ ಇನ್ಸ್ಟೆಕ್ಟರ್, ಅಡ್ಯಾರ್ ರೇಂಜ್ ಇವರೊಂದಿಗೆ, ಮೆ: ಗನ್ ಫಾರ್ಮಾ, ಚೆನ್ನೈ ಇಲ್ಲಿ ತನಿಖೆ ನಡೆಸಿದರು. ಮಾಲೀಕರಾದ ಶ್ರೀಮತಿ ಲಾವಣ್ಯ ಲಾಬ್ರಾಸಿ ಅವರು ಹೆರಿಗೆ ರಜೆಯಲ್ಲಿದ್ದರಿಂದ ಅವರ ಪತಿ ಶ್ರೀ ಜ್ಯೋತಿ ಕಣ್ಣನ್ (ಚಾ.ಸಾ–18) ಇವರಿಂದ ಹೇಳಿಕೆಯನ್ನು ಪಡೆದರು. ಹೇಳಿಕೆಯಲ್ಲಿ ಚಾ.ಸಾ–18 ರವರು ದಿನಾಂಕ 07/08/2020 ರ ಇನವಾಯಿಸ್ ಸಂಖ್ಯೆ: 0048 ಮತ್ತು ದಿನಾಂಕ 18/08/2020 ರ ಇನವಾಯಿಸ್ ಸಂಖ್ಯೆ: 0012 ತಮ್ಮ ಸಂಸ್ಥೆಗೆ ಸೇರಿದ್ದಾಗಿರುವುದಾಗಿ ತಿಳಿಸಿದರು. ಆರೋಪಿ ಎ2 ಸಂಸ್ಥೆಗೆ ಕೆಪ್ಸಿಮೆಟ್ ಮತ್ತು ಕೆಪ್ಸಿ ಔಷಧಗಳನ್ನು ಮಾರಾಟ ಮಾಡಿರುವುದಿಲ್ಲವೆಂದು ಹಾಗೂ ಕೆಪ್ಲಿನಾ–5 ಮಾತ್ರೆಗಳನ್ನು ಮಾತ್ರ ಮಾರಾಟ ಮಾಡಿರುವುದಾಗಿ ತಿಳಿಸಿರುತ್ತಾರೆ. ಚಾ.ಸಾ–2 ರವರು ಮಾದರಿ ಭಾಗಗಳನ್ನು ತೋರಿಸಿದಾಗ, ಅವರು ಸದರಿ ಮಾದರಿ ಕೆಪ್ಸಿಮೆಟ್ ಬ್ಯಾಚ್ ನಂ. ಕೆಟಿಎಸ್ಎಂ2002 ಮತ್ತು ಕೆಪ್ಸಿ–50 ಬ್ಯಾಚ್ ನಂ. ಕೆಟಿ50–2001 ಔಷಧಗಳ ಮಾರಾಟ ಮಾಡಿರುವುದಿಲ್ಲ ಹಾಗೂ ಖರೀದಿಸಿರುವುದಿಲ್ಲ ಎಂದು ದೃಢಪಡಿಸಿದರು. ಹಾಗೂ ಮೆ: ಕೆಪ್ಲಿಕ್ ಫಾರ್ಮಾಸ್ಯುಟಿಕಲ್ಸ್ (ಚಾ.ಸಾ–12) ಇವರ ಸಂಸ್ಥೆಯ ಅಧಿಕೃತ ಮಾರಾಟಗಾರರಾಗಿರುತ್ತಾರೆ ಎಂದು ತಿಳಿಸಿದರು. ಇದರೊಂದಿಗೆ ಔಷಧ ಪರವಾನಿಗೆ ನಮೂನೆ–20 ಬಿ, ನಮೂನೆ–21 ಬಿ, ಮಾಲೀಕರ ಗುರುತಿನ ಚೀಟಿ, ಚಾ.ಸಾ– 12 ಇವರ ಪತ್ರ ದಿನಾಂಕ: 26/02/2020 ಹಾಗೂ ದಿನಾಂಕ: 18/09/2020 ರ ಇನವಾಯಿಸ್ ಸಂಖ್ಯೆ : 82, ಚಾ.ಸಾ– 18 ಇವರ ಆಧಾರ್ ಕಾರ್ಡನ ಗುರುತಿನ ಚೀಟಿ, ಪ್ಯಾನ್ ಕಾರ್ಡಗಳ ದೃಢೀಕೃತ ನಕಲನ್ನು ಸಲ್ಲಿಸಿರುತ್ತಾರೆ ಹಾಗೂ ಚಾ.ಸಾ –2 ಇವರು ಶ್ರೀ ಎಸ್. ಕೇಥರಿನಾಥನ್ ಡ್ರಗ್ಸ್ ಇನ್ಸ್ಟೆಕ್ಟರ್, ಅಡ್ಯಾರ್ ರೇಂಜ್, ಜೊತೆ ಜಂಟಿ ಪರಿವೀಕ್ಷಣಾ ವರದಿ ದಿನಾಂಕ: 21/11/2022 ನ್ನು ಬರೆದಿರುತ್ತಾರೆ.

ಸಾಕ್ಷಿ ನೋಡಿ ಗುರುತಿಸಿದ ನಮೂನೆ–20 ಬಿ ದೃಢೀಕೃತ ನಕಲನ್ನು ನಿಶಾನೆ–61, ನಮೂನೆ–21 ಬಿ ದೃಢೀಕೃತ ನಕಲನ್ನು ನಿಶಾನೆ–61 ಎ, ಮಾಲೀಕರ ಗುರುತಿನ ಚೀಟಿಯ ದೃಢೀಕೃತ ನಕಲನ್ನು ನಿಶಾನೆ–61 ಬಿ, ದಿನಾಂಕ: 26/02/2020 ರ ಪತ್ರ ದೃಢೀಕೃತ ನಕಲನ್ನು ನಿಶಾನೆ –61 ಸಿ, ದಿನಾಂಕ: 18/09/2020 ರ ಇನವಾಯಿಸ್ ಸಂಖ್ಯೆ 82 ನ್ನು ನಿಶಾನೆ –61 ಡಿ, ಚಾ.ಸಾ– 18 ಇವರ ಆಧಾರ್ ಕಾರ್ಡನ ಗುರುತಿನ ಚೀಟಿ ದೃಢೀಕೃತ ನಕಲನ್ನು ನಿಶಾನೆ –61 ಇ, ಹಾಗೂ ಪ್ಯಾನ್ ಕಾರ್ಡಗಳ ದೃಢೀಕೃತ ನಕಲನ್ನು ನಿಶಾನೆ –61 ಎಫ್ ಎಂದು ಗುರುತಿಸಿದೆ. ಜಂಟಿ ಪರಿವೀಕ್ಷಣಾ ವರದಿ ದಿನಾಂಕ: 21/11/2022 ನ್ನು 61 ಜಿ ಎಂದು ಗುರುತಿಸಿದೆ.

51. ದಿನಾಂಕ 03/12/2022 ರಂದು ಚಾ.ಸಾ–2 ರವರು ಮೆ: ಗನ್ ಫಾರ್ಮಾ, ಚೆನ್ನೈ (ಚಾ.ಸಾ 18) ಇವರಿಂದ 2020–2021 ಮತ್ತು 2021–22 ರ ಬ್ಯಾಂಕ್ ಖಾತೆಯ ವಿವರಗಳು ಹಾಗೂ ದಿನಾಂಕ: 22/07/2020 ರ ಇನವಾಯಿಸ್ ಸಂಖ್ಯೆ: KP–216 ಮತ್ತು ಕೊರಿಯರ್ ರಿಸ್ಪಿಷ್ಟ ದೃಢೀಕೃತ ಪ್ರತಿಯನ್ನು ಅಂಚೆ ಲಕೋಟೆಯೊಂದಿಗೆ ಸ್ವೀಕರಿಸಿದರು. ಸಾಕ್ಷಿ ನೋಡಿ ಗುರುತಿಸಿದ ಬ್ಯಾಂಕ್ ಖಾತೆಯ ವಿವರಗಳ ದೃಢೀಕೃತ ನಕಲನ್ನು (ಪುಟ ಸಂಖ್ಯೆ:454 ರಿಂದ 492) ನಿಶಾನೆ ಪಿ–62 ಎಂದು ಗುರುತಿಸಲಾಗಿದೆ. ದಿನಾಂಕ: 22/07/2020 ರ ಇನವಾಯಿಸ್ ದೃಢೀಕೃತ ಪ್ರತಿಯನ್ನು ನಿಶಾನೆ ಪಿ–62 ಎ ಎಂದು ಮತ್ತು ಕೊರಿಯರ್ ರಿಸ್ಪಿಟ್ಟನ ದೃಡೀಕೃತ ನಕಲನ್ನು ನಿಶಾನೆ ಪಿ–62 ಬಿ ಎಂದು ಹಾಗೂ ಅಂಚೆ ಲಕೋಟೆಯನ್ನು ನಿಶಾನೆ ಪಿ–62 ಸಿ ಎಂದು ಗುರುತಿಸಿದೆ.

52. ದಿನಾಂಕ 20/12/2022 ರಂದು ಚಾ.ಸಾ–2 ರವರು ಸೆಕ್ಷನ್ 18 ಎ ಮತ್ತು 22(1)(ಸಿಸಿಎ) ಅಡಿಯಲ್ಲಿ ಎ 2 ರವರಿಗೆ ಸದರಿ ಔಷಧಿಗಳ ಕೊಂಡ ಮೂಲವನ್ನುತಿಳಿಸಲು ಹಾಗೂ ಸಂಬಂಧಪಟ್ಟ ಖರೀದಿ/ ಮಾರಾಟ ರಸೀದಿಗಳನ್ನು ನೀಡಲು ಕೋರಿ, ನೆನಪೋಲೆ ನೋಟಿಸ್ ನ್ನು ಕಳುಹಿಸಿದರು ಹಾಗೂ ಅದರ ಪ್ರತಿಯನ್ನು ಎ 2 ರವರ ನಿವಾಸದ ವಿಳಾಸ, ಶ್ರೀಮತಿ ನಾಗಲಕ್ಷ್ಮಿ ಔಷಧ ಪರಿವೀಕ್ಷಕರು, ಕೋಯಂಬತ್ತೂರು (ಚಾಸಾ–14) ಮತ್ತು ಪೋಲಿಸ್ ಸಬ್ ಇನ್ಸಪೆಕ್ಟರ್ ಸೇಲಂ ಇವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿರುತ್ತಾರೆ.

ಸಾಕ್ಷಿ ನೋಡಿ ಗುರುತಿಸಿದ ದಿನಾಂಕ 20/12/2022 ರ ನೆನಪೋಲೆ ನೋಟಿಸ್‌ನ್ನು ನಿಶಾನೆ ಪಿ–63 ಎಂದು ಗುರುತಿಸಲಾಗಿದೆ. ಎ 2 ಸಂಸ್ಥೆಗೆ ಕಳುಹಿಸಿರುವ ಸದರಿ ನೋಟಿಸ್ ತಲುಪದೇ ವಾಪಸ್ಸಾಗಿದ್ದು, ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ–63 ಎ ಎಂದು ಗುರುತಿಸಲಾಗಿದೆ. ಎ 2 ರವರ ನಿವಾಸದ ವಿಳಾಸಕ್ಕೆ ತಲುಪಿರುವ ಸದರಿ ನೋಟಿಸ್ ದಿನಾಂಕ 05/01/2023 ರಂದು ಸ್ವೀಕೃತಿಯಾಗಿದ್ದು ಅದರ ಬಗ್ಗೆ

ಸ್ವೀಕೃತಿಯನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿಶಾನೆ ಪಿ–63 ಬಿ ಎಂದು ಗುರುತಿಸಲಾಗಿದೆ. ಚಾಸಾ 14 ರವರಿಗೆ ತಲುಪಿರುವ ಸದರಿ ನೋಟಿಸಿನ ದಿನಾಂಕ:29/12/2022 ರ ಸ್ವೀಕೃತಿಯನ್ನು ಸಾಕ್ಷಿ ಗುರುತಿಸಿದ್ದು ನಿಶಾನೆ ಪಿ–63 ಸಿ ಹಾಗೂ ಪೋಲಿಸ್ ಸಬ್ ಇನ್ಸಪೆಕ್ಟರ್ ಸೇಲಂ ಇವರಿಗೆ ತಲುಪಿರುವ ಸದರಿ ನೋಟಿಸಿನ ದಿನಾಂಕ:10/01/2023 ರ ಸ್ವೀಕೃತಿಯನ್ನು ನಿಶಾನೆ ಪಿ–63 ಡಿ ಎಂದು ಗುರುತಿಸಲಾಗಿದೆ.

53. ದಿನಾಂಕ 12/01/2023 ರಂದು ಚಾ.ಸಾ 2 ವರು ಆರೋಪಿ ಎ2 ರಿಂದ ಅಕೌಂಟ್ ಲೆಡ್ಜರ್ ರಿಪೋರ್ಟ, ಎ2 ಸಂಸ್ಥೆಯ ಜಿಎಸ್‌ಟಿ ಪ್ರಮಾಣಪತ್ರ, ಔಷಧ ಪರವಾನಿಗೆ ನಮೂನೆ–20 ಬಿ & ನಮೂನೆ–21 ಬಿ ನಕಲನ್ನು ಅಂಚೆ ಲಕೋಟೆಯೊಂದಿಗೆ ಸ್ವೀಕರಿಸಿದರು. ಸಾಕ್ಷಿ ನೋಡಿ ಗುರುತಿಸಿದ ಅಕೌಂಟ್ ಲೆಡ್ಜರ್ ರಿಪೋರ್ಟನ ದೃಡೀಕೃತ ನಕಲನ್ನು ನಿಶಾನೆ ಪಿ–64 ಎಂದು ಗುರುತಿಸಲಾಗಿದೆ. ಜಿಎಸ್‌ಟಿ ಪ್ರಮಾಣಪತ್ರ ದೃಢೀಕೃತ ನಕಲನ್ನು ನಿಶಾನೆ ಪಿ–64 ಎ ಎಂದು ಗುರುತಿಸಲಾಗಿದೆ .ನಮೂನೆ–20 ಬಿ ಮತ್ತು ನಮೂನೆ–21 ಬಿ ಇವುಗಳು ಜರಾಕ್ಸ ಪ್ರತಿಗಳಾಗಿರುವುದರಿಂದ ಇವುಗಳನ್ನು ಗುರುತು ಮಾಡಿರುವುದಿಲ್ಲ. ಹಾಗೂ ಅಂಚೆ ಲಕೋಟೆಯನ್ನು ನಿಶಾನೆ ಪಿ–64 ಬಿ ಎಂದು ಗುರುತಿಸಿದೆ.

54. ದಿನಾಂಕ 31/01/2023 ರಂದು ಚಾ.ಸಾ– 2 ಅವರು ಸೆಕ್ಷನ್ 18 ಎ ಮತ್ತು 22(1)(ಸಿಸಿಎ) ಅಡಿಯಲ್ಲಿ ಆರೋಪಿ ಎ2 ರವರಿಗೆ ಸದರಿ ಔಷಧಿಗಳ ಕೊಂಡ ಮೂಲವನ್ನು ತಿಳಿಸಲು ಹಾಗೂ ಸಂಬಂಧಪಟ್ಟ ಖರೀದಿ/ಮಾರಾಟ ರಸೀದಿಗಳನ್ನು ನೀಡಲು ಕೋರಿ ನೆನಪೋಲೆ ನೋಟಿಸ್ ನ್ನು ಮತ್ತೋಮ್ಮೆ ಕಳುಹಿಸಿದರು ಹಾಗೂ ಅದರ ಪ್ರತಿಯನ್ನು ಎ2 ರವರ ನಿವಾಸದ ವಿಳಾಸ, ಶ್ರೀಮತಿ ನಾಗಲಕ್ಷ್ಮಿ ಔಷಧ ಪರಿವೀಕ್ಷಕರು, ಕೋಯಂಬತ್ತೂರು (ಚಾಸಾ–14) ಮತ್ತು ಪೋಲಿಸ್ ಸಬ್ ಇನ್ಸಪೆಕ್ಟರ್ ಸೇಲಂ ಇವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿರುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ ದಿನಾಂಕ 31/01/2023 ರ ನೆನಪೋಲೆ ನೋಟಿಸ್ ನ್ನು ನಿಶಾನೆ ಪಿ–65 ಎಂದು ಗುರುತಿಸಲಾಗಿದೆ. ಎ2 ಸಂಸ್ಥೆಗೆ ಕಳುಹಿಸಿರುವ ಸದರಿ ನೋಟಿಸ್ ತಲುಪದೇ ವಾಪಸ್ಸಾಗಿದ್ದು, ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ.ಪಿ–65 ಎ ಎಂದು ಗುರುತಿಸಲಾಗಿದೆ. ಪೋಲಿಸ್ ಸಬ್ ಇನ್ಸಪೆಕ್ಟರ್ ಸೇಲಂ ಇವರಿಗೆ ತಲುಪಿರುವ ದಿನಾಂಕ:16/02/2023 ರ ಸದರಿ ನೋಟಿಸಿನ ಸ್ವೀಕೃತಿಯನ್ನು ನಿಶಾನೆ ಪಿ–65 ಬಿ ಎಂದು ಗುರುತಿಸಲಾಗಿದೆ. ಎ2 ರವರ ನಿವಾಸದ ವಿಳಾಸಕ್ಕೆ ತಲುಪಿರುವ ದಿನಾಂಕ 21/02/2023 ಸದರಿ ನೋಟಿಸ್‌ನ ರ ಸ್ವೀಕೃತಿಯನ್ನು ನಿಶಾನೆ ಪಿ–65 ಸಿ ಎಂದು ಹಾಗೂ ಚಾಸಾ– 14 ರವರಿಗೆ ತಲುಪಿರುವ ಸದರಿ ನೋಟಿಸಿನ ದಿನಾಂಕ:21/02/2023 ರ ಸ್ವೀಕೃತಿಯನ್ನು ನಿಶಾನೆ ಪಿ–65 ಡಿ ಎಂದು ಗುರುತಿಸಲಾಗಿದೆ.

55. ದಿನಾಂಕ 14-02-2023 ರಂದು ಚಾ.ಸಾ 2 ಅವರು ಸೆಕ್ಷನ್ 18 ಎ ಮತ್ತು 22(1)(ಸಿಸಿಎ) ಅಡಿಯಲ್ಲಿ ಮೆ: ಗನ್ ಫಾರ್ಮಾ, ಅಡ್ಯಾರ್, ಚೆನ್ನೈ ಮಾಲೀಕರಾದ ಶ್ರೀಮತಿ ಲಾವಣ್ಯ ಲಾಬ್ರಾಸಿ ಕೆ (ಚಾ.ಸಾ-19) ಅವರಿಗೆ ಸದರಿ ಔಷಧಿಗಳ ಕೊಂಡ ಮೂಲವನ್ನು ತಿಳಿಸಲು ಹಾಗೂ ಸಂಬಂಧಪಟ್ಟ ಖರೀದಿ/ಮಾರಾಟ ರಸೀದಿಗಳನ್ನು ನೀಡಲು ಕೋರಿ ನೆನಪೋಲೆಯನ್ನು ಕಳುಹಿಸಿದರು ಹಾಗೂ ಅದರ ಪ್ರತಿಯನ್ನು ಚಾ.ಸಾ-19 ಇವರ ಮನೆ ವಿಳಾಸಕ್ಕೆ ಹಾಗೂ ಶ್ರೀ ಕೇಥರಿನಾಥನ್ ಔಷಧ ಪರಿವೀಕ್ಷಕರು, ಅಡ್ಯಾರ್, ರೆಂಜ್ ಇವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿರುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ ದಿನಾಂಕ 20/12/2022 ರ ನೆನಪೋಲೆ ನೋಟಿಸ್‌ನ್ನು ನಿಶಾನೆ ಪಿ-66 ಎಂದು ಗುರುತಿಸಲಾಗಿದೆ. ಚಾಸಾ-19 ರವರ ಸಂಸ್ಥೆಗೆ ತಲುಪಿರುವ ಸದರಿ ನೋಟಿಸ್‌ನ ದಿನಾಂಕ 06/03/2023 ರ ಸ್ವೀಕೃತಿಯನ್ನು ನಿಶಾನೆ ಪಿ-66 ಎ ಎಂದು ಹಾಗೂ ಚಾಸಾ-19 ರವರ ನಿವಾಸದ ವಿಳಾಸಕ್ಕೆ ತಲುಪಿರುವ ಸದರಿ ನೋಟಿಸ್‌ನ ದಿನಾಂಕ 06/03/2023 ರ ಸ್ವೀಕೃತಿಯನ್ನು ನಿಶಾನೆ ಪಿ-66 ಬಿ ಎಂದು ಹಾಗೂ ಶ್ರೀ ಕೇಥರಿನಾಥನ್ ಔಷಧ ಪರಿವೀಕ್ಷಕರವರಿಗೆ ತಲುಪಿರುವ ಸದರಿ ನೋಟಿಸಿನ ದಿನಾಂಕ: 06/03/2023 ರ ಸ್ವೀಕೃತಿಯನ್ನು ನಿಶಾನೆ ಪಿ-66 ಸಿ ಎಂದು ಗುರುತಿಸಲಾಗಿದೆ.

56. ದಿನಾಂಕ 28/02/2023 ರಂದು ಚಾ.ಸಾ-2 ಅವರು ಚಾ.ಸಾ-19 ರಿಂದ ನೋಟಿಸಿಗೆ ಉತ್ತರವನ್ನು ಸ್ವೀಕರಿಸಿದರು. ಇದರಲ್ಲಿ ಅವರು ಔಷಧಗಳಾದ ಕೆಪ್ಸಿ-50, ಕೆಪ್ಸಿ-100, ಮತ್ತು ಕೆಪ್ಸಿಮೆಟ್ ಮಾತ್ರೆಗಳನ್ನು ತಯಾರಿಕಾ ಸಂಸ್ಥೆ ಮೆ: ಕೆಪ್ನಿಕ್ ಫಾರ್ಮಾಸ್ಯುಟಿಕಲ್ಸ್ ಹಿಮಾಚಲ ಪ್ರಧೇಶ ಇವರಿಂದ ಖರೀದಿಸಿರುವುದಾಗಿ ತಿಳಿಸಿ, ದಿನಾಂಕ: 26/02/2020 ರ ಚಾ.ಸಾ-12 ರವರ ಪತ್ರ, ದಿನಾಂಕ: 18/05/2020 ರ ಇನವಾಯಿಸ್, ಅಂಚೆ ಕಚೇರಿ ರಿಸಿಪ್ಟ, ದಿನಾಂಕ:24/02/2023 ರ ಲೀಗಲ್ ನೋಟೀಸ್‌ನ ದೃಡೀಕೃತ ನಕಲು, ಎಕ್ಸೆಸ್ ಬ್ಯಾಂಕ್ನ ಖಾತೆಯ ವಹಿವಾಟು ವಿವರಗಳು, ದಿನಾಂಕ:22/07/2020 ರ ಇನವಾಯಿಸ್, ಐಡಿಎಫ್‌ಸಿ ಫಸ್ಟ ಬ್ಯಾಂಕ ಖಾತೆಯ ವಹಿವಾಟು ವಿವರಗಳು, ಮಾರಾಟ ವಿವರಗಣೆಗಳು, ದಿನಾಂಕ: 23/02/20223 ರ ಸ್ಟಾಫ್ ಸೇಲ ಇ-ಮೇಲ್ ಪ್ರತಿ, ದಿನಾಂಕ:14/10/2020 ರ ಚಾ.ಸಾ.12 ರವರ ಪತ್ರ, ದಿನಾಂಕ:08/09/2020 ರ ಇನವಾಯಿಸ, ದಿನಾಂಕ:14/12/2020 ರ ಇನವಾಯಿಸ್, ದಿನಾಂಕ:12/11/2020 ರ ಇನವಾಯಿಸ್‌ಗಳ ದೃಡೀಕೃತ ನಕಲನ್ನು ಉತ್ತರದೊಂದಿಗೆ ಸಲ್ಲಿಸಿರುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ ದಿನಾಂಕ 28/02/2023 ರ ಉತ್ತರವನ್ನು ನಿಶಾನೆ ಪಿ-67 ಎಂದು ಗುರುತಿಸಲಾಗಿದೆ. ದಿನಾಂಕ: 26/02/2020 ರ ಚಾ.ಸಾ-12 ರವರ ಪತ್ರವನ್ನು ನಿಶಾನೆ ಪಿ-67 ಎ ಎಂದು, ದಿನಾಂಕ: 18/05/2020 ರ ಇನವಾಯಿಸ್ ದೃಡೀಕೃತ ನಕಲನ್ನು ನಿಶಾನೆ ಪಿ-67 ಬಿ ಎಂದು, ಅಂಚೆ ಕಚೇರಿ ರಿಸಿಪ್ಟನ್ನು ನಿಶಾನೆ ಪಿ-67 ಸಿ ಎಂದು, ದಿನಾಂಕ:24/02/2023 ರ ಲೀಗಲ್ ನೋಟೀಸ್‌ನ

ದೃಡೀಕೃತ ನಕಲನ್ನು ನಿಶಾನೆ ಪಿ–67 ಡಿ ಎಂದು, ಎಕ್ಸಿಸ್ ಬ್ಯಾಂಕ್ ಖಾತೆಯ ವಹಿವಾಟು ವಿವರಗಳ ದೃಡೀಕೃತ ನಕಲನ್ನು ನಿಶಾನೆ ಪಿ–67 ಇ ಎಂದು, ಗನ್ಫಾರ್ಮಾ ರವರು ಮಾರಾಟ ಮಾಡಿದ ವಿವರದ ದೃಢೀಕವತ ನಕಲು ನಿಶಾನೆ ಪಿ–67 (ಎಫ್) ಎಂದು, ದಿನಾಂಕ:22/07/2020 ರ ಇನವಾಯಿಸ್ ದೃಡೀಕೃತ ನಕಲನ್ನು ನಿಶಾನೆ ಪಿ–67 ಜಿ ಎಂದು, ಐಡಿಎಫ್‌ಸಿ ಫಸ್ಟ ಬ್ಯಾಂಕ ಖಾತೆಯ ವಹಿವಾಟು ವಿವರಗಳ (ಪುಟ ಸಂಖ್ಯೆ 538 ರಿಂದ 561) ದೃಡೀಕೃತ ನಕಲನ್ನು ನಿಶಾನೆ ಪಿ–67 ಹೆಚ್ ಎಂದು, ಮಾರಾಟ ವಿವರಣೆ ಗಳ ದೃಡೀಕೃತ ನಕಲನ್ನು (ಪುಟ ಸಂಖ್ಯೆ:562 ರಿಂದ 568) ನಿಶಾನೆ ಪಿ–67 ಐ ಎಂದು, ದಿನಾಂಕ: 23/02/2023 ರ ಸ್ಟಾಫ್ ಸೇಲ ಇ–ಮೇಲ್ ಪ್ರತಿಯನ್ನು ನಿಶಾನೆ ಪಿ–67 ಜೆ ಎಂದು, ದಿನಾಂಕ:14/10/2020 ರ ಚಾ.ಸಾ.12 ರವರ ದೃಡೀಕೃತ ಪತ್ರವನ್ನು ನಿಶಾನೆ ಪಿ–67 ಕೆ ಎಂದು, ದಿನಾಂಕ:08/09/2020 ರ ಇನವಾಯಿಸ, ದಿನಾಂಕ:14/12/2020 ರ ಇನವಾಯಿಸ್, ದಿನಾಂಕ:12/11/2020 ರ ಇನವಾಯಿಸ್‌ಗಳ ದೃಡೀಕೃತ ನಕಲನ್ನು ಒಟ್ಟಾರೆ ನಿಶಾನೆ ಪಿ–67 ಎಲ್ (ಪುಟ 571 ರಿಂದ 574) ಎಂದು, ಹಾಗೂ ಅಂಚೆ ಲಕೋಟೆಯನ್ನು ನಿಶಾನೆ ಪಿ–67 ಎಮ್ ಎಂದು ಗುರುತಿಸಿದೆ.

57. ದಿನಾಂಕ 24/11/2023 ರಂದು ಚಾ.ಸಾ–2 ಅವರು ವರ್ಗಾವಣೆಯಿಂದಾಗಿ ಸದರಿ ತನಿಖಾ ಕಡತಗಳನ್ನು ಮಾದರಿ ಔಷಧಗಳನ್ನು ಮತ್ತು ಮುದ್ದೆಮಾಲನ್ನು ಶ್ರೀ ನೀಲಕಂಠ ರಾಠೋಡ್ ಆಗಿನ ಸಹಾಯಕ ಔಷಧ ನಿಯಂತ್ರಕರು–2, ಧಾರವಾಡ ಸರ್ಕಲ್, ಹುಬ್ಬಳ್ಳಿ (ಚಾ.ಸಾ–20) ಅವರಿಗೆ ಹಸ್ತಾಂತರಿಸಿದರು ನಂತರ ದಿನಾಂಕ 13/09/2024 ರಂದು ಶ್ರೀ ನೀಲಕಂಠ ರಾಠೋಡ್ (ಚಾ.ಸಾ–20) ಅವರು ತಮ್ಮ ವರ್ಗಾವಣೆಯಿಂದಾಗಿ ಸದರಿ ತನಿಖಾ ಕಡತಗಳನ್ನು ಮಾದರಿ ಔಷಧಗಳನ್ನು ಮತ್ತು ಮುದ್ದೆಮಾಲನ್ನು ದೂರುದಾರರಾದ ನನಗೆ (ಚಾ.ಸಾ–1, ನೀಲಿಮಾ ಅಶೋಕ್ ಕೊಟ್ಟಣ, ಸಹಾಯಕ ಔಷಧ ನಿಯಂತ್ರಕರು–2, ಧಾರವಾಡ ಸರ್ಕಲ್, ಹುಬ್ಬಳ್ಳಿ) ಹಸ್ತಾಂತರಿಸಿರುತ್ತಾರೆ.

58. ದಿನಾಂಕ 05/02/2025 ರಂದು ಚಾ.ಸಾ–1 ಅವರು, ಶಾಖಾ ಮುಖ್ಯಸ್ಥರಾದ ಶ್ರೀ ಕಣಿಮೋಜಿ.ಇ., ಉಪ ಬ್ಯಾಂಕ್ ವ್ಯವಸ್ಥಾಪಕ (ಇಸಿಎಂ:166946) ಇಂಡಸ್‌ಇಂಡ್ ಬ್ಯಾಂಕ್ ಲಿಮಿಟೆಡ್, ಕೋಯಂಬತ್ತೂರು (ಚಾ.ಸಾ–21) ಅವರಿಂದ ದಿನಾಂಕ 29/01/2025 ರ ಉತ್ತರ ಪತ್ರದೊಂದಿಗೆ ಎ 2 ಸಂಸ್ಥೆಯ ಏಪ್ರಿಲ್ –2021 ರಿಂದ ಅಕ್ಟೋಬರ್ –2021 ರ ಅವಧಿಯ ಬ್ಯಾಂಕ್ ಖಾತೆಯ ವಿವರಣೆಗಳನ್ನು ಸ್ವೀಕರಿಸಿದ್ದೇನೆ. ಚಾ.ಸಾ–21 ಸಲ್ಲಿಸಿದ ಬ್ಯಾಂಕ್ ಖಾತೆ ವಿವರಣೆಗಳನ್ನು ಪರಿಶೀಲಿಸಲಾಗಿ ಆರೋಪಿ ಎ 1 ಮತ್ತು ಆರೋಪಿ ಎ 2

ನಡುವೆ ಮಾಡಿದ ಪಾವತಿಗಳು/ವಹಿವಾಟುಗಳು ಖಚಿತವಾಗಿರುವುದು ಕಂಡು ಬಂದಿರುತ್ತದೆ. ಸಾಕ್ಷಿ ನೋಡಿ ಗುರುತಿಸಿದ ದಿನಾಂಕ:29/01/2025 ರ ಇಂಡ್‌ಸ್ ಇಂಡ್ ಬ್ಯಾಂಕನ ಉತ್ತರವನ್ನು ನಿಶಾನೆ ಪಿ-68 ಎಂದು ಗುರುತಿಸಲಾಗಿದೆ. ಹಾಗೂ ಪತ್ರದಲ್ಲಿ ಮಾಡಿರುವ ಸಾಕ್ಷಿಯ ಸಹಿಯನ್ನು ನಿಶಾನೆ ಪಿ-68 ಎ ಎಂದು ಗುರುತಿಸಿದೆ. ಎ2 ಸಂಸ್ಥೆಯ ಇಂಡಸ್‌ಇಂಡ್ ಬ್ಯಾಂಕ್ ಖಾತೆಯ ವಿವರಣೆಗಳನ್ನು (ಪುಟ ಸಂಖ್ಯೆ:578 ರಿಂದ 600) ನಿಶಾನೆ ಪಿ-68 ಬಿ ಹಾಗೂ ಅಂಚೆ ಲಕೋಟೆಯನ್ನು ನಿಶಾನೆ ಪಿ-68 ಸಿ ಎಂದು ಗುರುತಿಸಿದೆ.

59. ಚಾ.ಸಾ-1 ಅವರು ಆರೋಪಿ ಎ1 ಸಂಸ್ಥೆಗೆ ಸಂಬಂಧಿಸಿದ ಪರವಾನಿಗೆ ಕವಚ ಪತ್ರ ನಮೂನೆ-20 ಬಿ,ನಮೂನೆ-21 ಬಿ, ನಮೂನೆ-19, ಅಧಿಕ ಮಾಹಿತಿ ಹಾಳೆ, ಬಾಡಿಗೆ ಕರಾರು ಪತ್ರ, ಮಾಲೀಕರ ಘೋಷಣಾ ಪತ್ರ ಅಫಿಡೆವಿಟ್, ದಕ್ಷ ವ್ಯಕ್ತಿ ಘೋಷಣಾ ಪತ್ರ ಅಫಿಡೆವಿಟ್, ಆರೋಪಿ 1 ಇವರ ಆಧಾರ್ ಕಾರ್ಡ್, ದಕ್ಷ ವ್ಯಕ್ತಿ ಚಾ.ಸಾ-9 ಇವರ ಆಧಾರ ಕಾರ್ಡಗಳ ದೃಢೀಕರಿಸಿದ ಪ್ರತಿಗಳನ್ನು ಪಡೆದುಕೊಂಡರು. ಸಾಕ್ಷಿ ನೋಡಿ ಗುರುತಿಸಿದ ಪರವಾನಿಗೆ ಕವಚ ಪತ್ರದ ದೃಡೀಕೃತ ನಕಲನ್ನು ನಿಶಾನೆ-69 ಎಂದು ಗುರುತಿಸಿದೆ. ನಮೂನೆ-20 ಬಿ ದೃಡೀಕೃತ ನಕಲನ್ನು ನಿಶಾನೆ-69 ಎ ಎಂದು, ನಮೂನೆ-21 ಬಿ ದೃಡೀಕೃತ ನಕಲನ್ನು ನಿಶಾನೆ-69 ಬಿ ಎಂದು, ನಮೂನೆ-19 ದೃಡೀಕೃತ ನಕಲನ್ನು ನಿಶಾನೆ-69 ಸಿ ಎಂದು, ಅಧಿಕ ಮಾಹಿತಿ ಹಾಳೆ ದೃಡೀಕೃತ ನಕಲನ್ನು ನಿಶಾನೆ-69 ಡಿ ಎಂದು, ಬಾಡಿಗೆ ಕರಾರು ಪತ್ರ, ದೃಡೀಕೃತ ನಕಲನ್ನು ನಿಶಾನೆ-69 ಇ ಎಂದು, ಮಾಲೀಕರ ಘೋಷಣಾ ಪತ್ರ ಅಫಿಡೆವಿಟ್ ದೃಡೀಕೃತ ನಕಲನ್ನು ನಿಶಾನೆ-69 ಎಫ್ ಎಂದು, ದಕ್ಷ ವ್ಯಕ್ತಿ ಘೋಷಣಾ ಪತ್ರ ಅಫಿಡೆವಿಟ್ ದೃಡೀಕೃತ ನಕಲನ್ನು ನಿಶಾನೆ-69 ಜಿ ಎಂದು, ಆರೋಪಿ 1 ಇವರ ಆಧಾರ್ ಕಾರ್ಡ್ ದೃಡೀಕೃತ ನಕಲನ್ನು ನಿಶಾನೆ-69 ಹೆಚ್ ಹಾಗೂ ದಕ್ಷ ವ್ಯಕ್ತಿ ಚಾ.ಸಾ-9 ಇವರ ಆಧಾರ ಕಾರ್ಡ ದೃಡೀಕೃತ ನಕಲನ್ನು ನಿಶಾನೆ-69 ಐ ಎಂದು ಗುರುತಿಸಿದೆ. ಚಾಸಾ-1 ರವರು ತನಿಖಾ ವರದಿ ದಿನಾಂಕ: 11/03/2025 ನ್ನು ಆಯುಕ್ತಕರು ಆಹಾರ ಸುರಕ್ಷತೆ ಮತ್ತು ಔಷದ ಆಡಳಿತ ಬೆಂಗಳೂರು ಇವರಿಗೆ ಕಳುಹಿಸಿದ್ದು, ಆರೋಪಿ-1 ಮತ್ತು 2 ರವರ ವಿರುದ್ಧ ಮೊಕದ್ದಮೆ ಹೂಡಲು ಅನುಮತಿ ನೀಡುವಂತೆ ಕೋರಿರುವ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-70 ಎಂದು ಗುರುತಿಸಿದೆ. ಸಾಕ್ಷಿ ಗುರುತಿಸಿದ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ ಪಿ-70(ಎ) ಎಂದು ಗುರುತಿಸಲಾಗಿದೆ. ಉಪ ಔಷಧ ನಿಯಂತ್ರಕರು ಮತ್ತು ಪರವಾನಿಗೆ ಪ್ರಾಧಿಕಾರಿ, ಕೇಂದ್ರ ಕಚೇರಿ,ಬೆಂಗಳೂರು ರವರು ಪತ್ರ ದಿನಾಂಕ: 12/05/2025 ರಲ್ಲಿ ಆರೋಪಿ-1 ಮತ್ತು ಆರೋಪಿ-2 ರವರ ವಿರುದ್ಧ ಮೊಕದ್ದಮೆ ಹೂಡಲು ಅನುಮತಿ ನೀಡಿರುವ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ನಿಪಿ-71 ಎಂದು, ಅದರಲ್ಲಿರುವ ಸಾಕ್ಷಿ ಗುರುತಿಸಿದ ಸಾಕ್ಷಿ ಸಹಿಯನ್ನು ನಿಶಾನೆ ಪಿ-71 (ಎ) ಎಂದು ಗುರುತಿಸಿದೆ.

**ಸಾಕ್ಷಿಯನ್ನು ದಿಃ 02-05-2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ವಿಚಾರಣೆಃ**

60. ಮೇಲಿನ ಎಲ್ಲಾ ತನಿಖೆಯಿಂದ ಈ ಕೆಳಕಂಡಂತೆ ಸಾಬೀತಾಗಿರುತ್ತದೆ.

Kepsimet (Sitagliptin & Metfromin Hydrochloride Tablets) & Kepsi-50 Tablets (Sitagliptin Phosphate Tablets IP) ಔಷಧಿಗಳನ್ನು ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ನಿಯಂತ್ರಿಸಲು ಮತ್ತು ಮಧುಮೇಹದಿಂದಾಗುವ ತೊಂದರೆಗಳನ್ನು ನಿಯಂತ್ರಿಸಲು ಬಳಸಲಾಗುತ್ತದೆ.

- Kepsi-50 Tablets B.No. KT50-2001 ಔಷಧವು ವಿಶ್ಲೇಷಣಾ ವರದಿ ನಮೂನೆ-13, ದಿನಾಂಕ: 28/02/2022 ರಲ್ಲಿ "Identification test for sitagliptin Phosphate & Assay for Sitagliptin Phosphate'' ಅಡಿಯಲ್ಲಿ ಉತ್ತಮಗುಣಮಟ್ಟವಲ್ಲದೆಂದು ಘೋಷಿತವಾಗಿರುತ್ತದೆ.
- Kepsimet Tablets, B.No.KTSM2002 ಔಷಧವು ವಿಶ್ಲೇಷಣಾ ವರದಿ ನಮೂನೆ-13, ದಿನಾಂಕ: 03/03/2022 ರಲ್ಲಿ "Identification test for Sitaglptin Phsophate & Assay for Sitaglptin Phosphate & Test for Disintegraton'' ಅಡಿಯಲ್ಲಿ ಉತ್ತಮಗುಣಮಟ್ಟವಲ್ಲದೆಂದು ಘೋಷಿತವಾಗಿರುತ್ತದೆ.

- ಮೆ: ಕೆಪ್ಸಿಕ್ ಫಾರ್ಮಾಸ್ಯುಟಿಕಲ್ಸ್ (ಚಾ.ಸಾ 12) ರವರು ದಿನಾಂಕ 12/04/2022 ರ ಪತ್ರದಲ್ಲಿ ಸದರಿ Kepsimet Tablets, B.No.KTSM2002 & Kepsi–50 Tablets B.No. KT50–2001 ಗಳನ್ನು ಔಷಧಿಗಳನ್ನು ತಯಾರಿಸಿರುವುದನ್ನು ನಿರಾಕರಿಸಿರುತ್ತಾರೆ. ಆದ್ದರಿಂದ, ಸದರಿ ಔಷಧಿಗಳು "ಸ್ಪೂರಿಯಸ್'' (ನಕಲಿ) ಎಂದು ಸಾಬೀತಾಗಿರುತ್ತದೆ.

- ಆರೋಪಿ ಎ2, ಶ್ರೀ ಅರುಣ್ ಕುಮಾರ್ ಮಾರಾ, ಮಾಲೀಕರು, ಮೆ: ಬರ್ಕ್ ಮತ್ತು ಮಾರ್ ಫಾರ್ಮಾಸ್ಯುಟಿಕಲ್ಸ್ ರವರು Kepsimet Tablets, B.No.KTSM2002 & Kepsi–50 Tablets B.No. KT50–2001 ಔಷಧಿಗಳನ್ನು ಮೆ: ಆಪಲ್ ಫಾರ್ಮಾ (ಚಾ.ಸಾ 17) ಇವರಿಂದ, ಮೆ: ಪಿಎಂಬಿಜೆಕೆ, ಪೊಲ್ಲಾಚಿ (ಚಾ.ಸಾ 16) ಅಂಗಡಿ ಹೆಸರಿನಲ್ಲಿ ಖರೀದಿಸಿರವುದಾಗಿ ತಿಳಿಸಿ ಆರೋಪಿ ಎ1 ಸಂಸ್ಥೆ ಮೆ: ನಂದಿಕಾ ಹೆಲ್ತ್‌ಕೇರ್, ಹುಬ್ಬಳ್ಳಿಗೆ ಮಾರಾಟ ಮಾಡಿರುವುದನ್ನು ಒಪ್ಪಿಕೊಂಡಿರುತ್ತಾರೆ.

  ಆದರೆ ಪಿ ಎಂ ಬಿ ಜೆ ಕೆ ಪೊಲ್ಲಾಚಿ (ಚಾಸಾ–16) ರವರು ಸದರಿ ಔಷಧಗಳನ್ನು ಖರೀದಿಸಿರುವುದಿಲ್ಲ ಹಾಗೂ ತಮ್ಮ ಅಂಗಡಿ ಹೆಸರು / ವಿಳಾಸವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆಂದು ತಮ್ಮ ಪತ್ರದಲ್ಲಿ ತಿಳಿಸಿರುತ್ತಾರೆ.

- ದಿ ಪ್ರೊಫೆಷನಲ್ ಕೊರಿಯರ್ಸ್, ಕೋಯಂಬತ್ತೂರು (ಚಾ.ಸಾ–13) ರವರು ಕನ್ಸೈನ್ಮೆಂಟ್ಗಳನ್ನು ಎ2 ಸಂಸ್ಥೆ ಯವರು ಬುಕ್ ಮಾಡಿರುವುದಾಗಿ ಮತ್ತು ಎ1 ಸಂಸ್ಥೆಗೆ ತಲುಪಿಸಿರುವುದಾಗಿ ದೃಢಪಡಿಸಿರುತ್ತಾರೆ.

- ಬ್ಯಾಂಕ್ ದಾಖಲೆಗಳಿಂದ ಎ2 ಸಂಸ್ಥೆಗೆ, ಎ1 ಸಂಸ್ಥೆಯಿಂದ ಹಣ ಪಾವತಿಯಾಗಿರುವುದು ದೃಢಪಟ್ಟಿರುತ್ತದೆ. ಆದುದರಿಂದ, ಆರೋಪಿ ಎ2 ರವರು ಅನಧಿಕೃತ ಮೂಲಗಳಿಂದ ಔಷಧಿಗಳನ್ನು ಪಡೆದಿದ್ದಾರೆ ಎಂದು ತನಿಖೆಯಿಂದ ಸಾಬೀತಾಗುತ್ತದೆ ಹಾಗೂ ಅವರು ಖರೀದಿಸಿದ ಸೂಕ್ತ ದಾಖಲೆಗಳನ್ನು ಸಲ್ಲಿಸುವಲ್ಲಿ ವಿಫಲರಾಗಿರುತ್ತಾರೆ.

61. ಆರೋಪಿ ಎ1, ಶ್ರೀ ಮಹೇಶ್ ಕುಮಾರ್ ಜಿ. ಎನ್., ಮಾಲೀಕರು, ಮೆ: ನಂದಿಕಾ ಹೆಲ್ತ್‌ಕೇರ್, ಸಿಟಿಎಸ್ ನಂ. 2877–2920, ಅಂಗಡಿ ನಂ. 1, ಜಿಎಫ್–86 ಮತ್ತು 87, ಸ್ಯಾಟಲೈಟ್ ಕಾಂಪ್ಲೆಕ್ಸ್, ಕೊಪ್ಪಿಕರ್ ರಸ್ತೆ, ಹುಬ್ಬಳ್ಳಿ–580020 ರವರು ಮೆ: ಬರ್ಕ್ ಮತ್ತು ಮಾರ್ ಫಾರ್ಮಾಸ್ಯುಟಿಕಲ್ಸ್, ಕೋಯಂಬತ್ತೂರು (ಎ2

ಸಂಸ್ಥೆ) ಇವರಿಂದ ಉತ್ತಮಗುಣಮಟ್ಟವಲ್ಲದ ಔಷಧ ಹಾಗೂ ಸ್ಪೂರಿಯಸ್ "Kepsimet Tablets, B.No.KTSM2002 & Kepsi-50 Tablets B.No. KT50-2001 ಔಷಧಗಳನ್ನು ಖರೀದಿಸಿ, ಚಾ.ಸಾ-10 ಮತ್ತು ವಿವಿಧ ಸಂಸ್ಥೆಗಳಿಗೆ ಮಾರಾಟ ಮಾಡಿದ್ದು, ಡ್ರಗ್ಸ್ ಮತ್ತು ಕಾಸ್ಮೆಟಿಕ್ಸ್ ಕಾಯಿದೆ, 1940 ರ ಸೆಕ್ಷನ್ 18(a)(i) ಮತ್ತು ಸೆಕ್ಷನ್ 18(a)(i) r/w ಸೆಕ್ಷನ್ 17-B(e) ಉಲ್ಲಂಘಿಸಿದ್ದು, ಸೆಕ್ಷನ್ 27(d) & ಸೆಕ್ಷನ್ 27(c) ಅಡಿಯಲ್ಲಿ ಶಿಕ್ಷಾರ್ಹ ಅಪರಾಧವಾಗಿರುತ್ತದೆ.

62. ಆರೋಪಿ ಎ2 ಶ್ರೀ ಅರುಣ್ ಕುಮಾರ್ ಮಾರಾ, ಮಾಲೀಕರು, ಮೆ: ಬರ್ಕ್ ಮತ್ತು ಮಾರ್ ಫಾರ್ಮಾಸ್ಯುಟಿಕಲ್ಸ್, ಬಿ/255-1, ನೆಲ ಮಹಡಿ, ಶ್ರೀ ಬಾಲಾಜಿ ಅಪಾರ್ಟ್ಮೆಂಟ್ಸ್, ಡಾ. ರಾಧಾ ಕೃಷ್ಣನ್ ರಸ್ತೆ, ಶಿವಾನಂದ ಕಾಲೋನಿ, ಕೋಯಂಬತ್ತೂರು, ತಮಿಳುನಾಡು ರಾಜ್ಯರವರು ಉತ್ತಮಗುಣಮಟ್ಟವಲ್ಲದ ಔಷಧ ಹಾಗೂ ಸ್ಪೂರಿಯಸ್ "Kepsimet Tablets, B.No.KTSM2002 & Kepsi-50 Tablets B.No. KT50-2001 ಔಷಧಗಳನ್ನು ಖರೀದಿಸಿ, ಎ1 ಸಂಸ್ಥೆಗೆ ಮಾರಾಟ ಮಾಡಿರುವುದಲ್ಲದೆ, ಸದರಿ ಔಷಧಿಗಳಿಗೆ ಸಂಬಂಧಿಸಿದ ಖರೀದಿಸಿದ ಮೂಲ ಮತ್ತು ದಾಖಲೆಗಳನ್ನು ಸಲ್ಲಿಸಲು ವಿಫಲರಾಗಿರುತ್ತಾರೆ. ಇದರಿಂದ ಅವರು ಡ್ರಗ್ಸ್ ಮತ್ತು ಕಾಸ್ಮೆಟಿಕ್ಸ್ ಕಾಯಿದೆ 1940 ರ ಸೆಕ್ಷನ್ 18A, 22(i)(cca), ಸೆಕ್ಷನ್ 18(a)(i) & ಸೆಕ್ಷನ್18(a)(i) r/w ಸೆಕ್ಷನ್ 17-B(e) ಉಲ್ಲಂಘಿಸಿದ್ದು, ಸೆಕ್ಷನ್ 28 ಮತ್ತು ಸೆಕ್ಷನ್ 22(3), ಸೆಕ್ಷನ್ 27(d) & ಸೆಕ್ಷನ್ 27(c) ಅಡಿಯಲ್ಲಿ ಶಿಕ್ಷಾರ್ಹ ಅಪರಾಧವಾಗಿರುತ್ತದೆ.

63. ದಿನಾಂಕ: 11/09/2025 ರಂದು ಚಾ.ಸಾ-1 ಆದ ನಾನು ಸದರಿ ಕಲಂಗಳ ಅಡಿಯಲ್ಲಿ ಆರೋಪಿ ಎ1 ಮತ್ತು ಆರೋಪಿ ಎ2 ಇವರ ವಿರುದ್ಧ ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ ಇಲ್ಲಿ ಮೊಕದ್ದಮೆಯನ್ನು ದಾಖಲಿಸಿರುತ್ತೇನೆ. ಸಾಕ್ಷಿಯು ನೋಡಿ ಗುರುತಿಸಿದ ಫಿರ್ಯಾದಿ ಪ್ರತಿಯನ್ನು ನಿಶಾನೆ-ಪಿ.72 ಎಂದು ಹಾಗೂ ಸಾಕ್ಷಿಯು ತನ್ನ ಸಹಿಗಳನ್ನು ಗುರುತಿಸಿದ್ದು ಅದರಲ್ಲಿರುವ ಸಾಕ್ಷಿ ಗುರುತಿಸಿದ ಕೊನೆಯ ಪುಟದ ಸಹಿಯನ್ನು ನಿಶಾನೆ-ಪಿ.72(ಎ) ಎಂದು ಗುರುತಿಸಿದೆ.

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು). ಓ. ಹೇ. ಕೇ. ಸರಿ ಇದೆ.

**(ಬಿ. ಎಸ್. ಭಾರತಿ)**

ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ
ನ್ಯಾಯಾಧೀಶರು, ಧಾರವಾಡ